† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್ ಬಗ್ಗೆ ಏನು ತಿದ್ದುಪಡಿಯನ್ನು ತಂದಿದೆ ಇದು ಸೂಕ್ತವಲ್ಲ. ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರು ಮುಂದೆ ಬರಬಹುದಾದ ಅನಾಹುತವನ್ನು ಸ್ಪಷ್ಟವಾಗಿ ಹೇಳಿರುವುದಲ್ಲದೆ ಕೆಲವು ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಸರ್ಕಾರದವರು ಮುಂದೆ ಮಂಡಲ್ ಪಂಚಾಯತ್‌ನ್ನು ಮಾಡುವಂಥ ಸಂದರ್ಭದಲ್ಲಿ ೧೫ ಸಾವಿರಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಇರುವ ಕಡೆಗಳಲ್ಲಿ ಈಗಿರತಕ್ಕ ನಿಯಮದ ಪ್ರಕಾರ ಮಂಡಲ್ ಪಂಚಾಯಿತಿಯನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಆ ರೀತಿ ಅಭಿಪ್ರಾಯ ಸರ್ಕಾರದಲ್ಲಿ ಇರುವುದಾದರೆ ಅದನ್ನು ಸ್ಪಷ್ಟವಾಗಿ ಹೇಳಲಿ. ಯಾವ ಜಿಲ್ಲೆಯಲ್ಲಿ, ಯಾವ ಗ್ರಾಮದಲ್ಲಿ ೧೫ ಸಾವಿರಕ್ಕಿಂತ ಹೆಚ್ಚಿಗೆ ಜನರಿದ್ದಾರೆ ಅಂಥಾದ್ದನ್ನು ಒಂದು ಮಂಡಲ್ ಎಂದು ಮಾಡುತ್ತೇವೆಂದು ತಿದ್ದುಪಡಿಯನ್ನು ತಂದರೆ ಅನುಕೂಲವಾಗುತ್ತದೆ. ಒಂದು ಗ್ರಾಮದಲ್ಲಿ ೧೦ ಸಾವಿರ, ಇನ್ನೊಂದು ಗ್ರಾಮದಲ್ಲಿ ೧೫ ಸಾವಿರ ಜನಸಂಖ್ಯೆ ಇದ್ದರೆ ಎರಡೂ ಸೇರಿ ೨೫ ಸಾವಿರ ಜನಸಂಖ್ಯೆ ಆಗುತ್ತದೆ. ಆದ್ದರಿಂದ ಇಂಥ ಗ್ರಾಮಗಳನ್ನು ಒಂದಕ್ಕೊಂದು ಸೇರಿಸುವ ಕೆಲಸವನ್ನು ಮಾಡುವುದು ಬೇಡ. ಇವುಗಳನ್ನೇ ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ಮಂಡಲ ಎಂದು ಮಾಡಿ. ಈ ವಿಚಾರದಲ್ಲಿ ತಾವು ಸ್ಪಷ್ಟವಾಗಿ ಹೇಳಿದರೆ ಮುಂದೆ ತೊಂದರೆಯಾಗುವುದಿಲ್ಲ. ಸರ್ಕಾರ ಇದರ ಬಗ್ಗೆ ಯೋಚನೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳಲಿದ್ದರೆ, ಕೆಲವು ಪ್ರಭಾವಶಾಲಿಗಳು ಈ ಎರಡೂ ಗ್ರಾಮಗಳನ್ನು ಸೇರಿಸಿ ಒಂದು ಮಂಡಲ್ ಪಂಚಾಯತ್ ಮಾಡಿ ಎಂದು ಕೇಳುತ್ತಾರೆ. ಆಗ ನಿಮ್ಮ ಅಧಿಕಾರಿಗಳು ಆದಕ್ಕೆ ಮಣಿಯಬೇಕಾಗುತ್ತದೆ. ಇಲ್ಲದೇ ಹೋದರೆ ಆ ಪ್ರಭಾವಶಾಲಿಗಳು ಕೋರ್ಟಿಗೆ ಹೋಗುತ್ತಾರೆ. ಆದ್ದರಿಂದ ನಾನಾದರೂ ತಮಗೆ ಹೇಳುವುದೇನೆಂದರೆ, ಇನ್ನೂ ಪ್ರಾರಂಭದಲ್ಲೇ ಇದನ್ನು ಒಂದು ಗೊಂದಲಮಯವಾಗಿ ಮಾಡಬೇಡಿ. ಯಾವ ಯಾವ ಗ್ರಾಮಗಳಲ್ಲಿ ೧೫ ಸಾವಿರ ಜನಸಂಖ್ಯೆ ಇದೆ ಅದನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದೇವೆಂದು ಸ್ಪಷ್ಟವಾಗಿ ಹೇಳಬೇಕು.

SRI A. LAKSHMISAGAR.—Sir, the consideration of this Bill may kindly be taken up tomorrow.

MR. SPEAKER.—Yes.

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ವಾಮಿ, ಅಧ್ಯಕ್ಷರೆ, ನಾನು ಮಾನ್ಯ ಕಾನೂನು ಸಚಿವರ ಗಮನಕ್ಕೆ ಒಂದು ಮಾತನ್ನು ತರಬಯಸುತ್ತೇನೆ. ಇದರಲ್ಲಿ ಗ್ರೂಪ್ ಆಫ್ ವಿಲೇಜಸ್ ಎಂದು ಏನಿದೆ ಅದನ್ನು ತೆಗೆದುಬಿಡಲಿ. It will be safe.

SRI A. LAKSKMISAGAR.—Let us think it over.

Bangalore Metropolitan Development Authority (Amendment) Bill, 1985.

Motion to Consider

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, "೧೯೮೫ನೇ ಇಸವಿಯ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಮಾನ್ಯ ಸಭೆಯು ಪರಿಶೀಲಿಸಬೇಕೆಂದು ಸೂಚಿಸುತ್ತೇನೆ."

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಬೆಂಗಳೂರು ಪ್ರಾಧಿಕಾರ ಸಂಸ್ಥೆಗೆ ಸಂಬಂಧಪಟ್ಟ ಪ್ರಸೂದೆಯನ್ನು ಈ ಸಾರಿ ಕನ್ನಡದಲ್ಲಿ ತಯಾರು ಮಾಡಿದ್ದೇವೆ. ಇದು ಸುಮಾರು ೩-೪ ವರ್ಷ ದಿಂದಲೂ ನೆನೆಗುದಿಗೆ ಬಿದ್ದಿತ್ತು. ಕಳೆದ ವರ್ಷ ಈ ವಿಧೇಯಕ ಚರ್ಚೆಯಾಗದೆ ಹಾಗೆಯೇ ಉಳಿದಿತ್ತು. ಅದು ಇವೇ ಸದನದಲ್ಲಿ ಚರ್ಚೆಗೆ ಬಂದಿದ್ದಾಗ ಅದನ್ನು ಅಪೂರ್ಣವಾಗಿ ಮಾಡಿ ಮತ್ತೆ ಈ ವಿಧೇಯಕವನ್ನು ಈಗ ಅಂದರೆ ತಡವಾಗಿ ತಂದಿದ್ದೇವೆ. ನಮ್ಮ ಬೆಂಗಳೂರು ಮಹಾನಗರವು ಅತ್ಯಂತ

† ಈ ಚಿಪ್ಪೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವೇಗವಾಗಿ ಬೆಳೆಯುತ್ತಿದೆ. ಈ ನಗರ ಪ್ರದೇಶದಲ್ಲಿ ಹಲವಾರು ಸಂಸ್ಥೆಗಳು ಕೆಲಸ ಮಾಡುತ್ತಿವೆ. ಬೆಂಗಳೂರು ನಗರಸಭೆ, ಜಲಮಂಡಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮುಂತಾದ ಅನೇಕ ಸ್ವಾಯತ್ತ ಸಂಸ್ಥೆಗಳು ತಮ್ಮ ಕಾರ್ಯವನ್ನು ನಿರ್ವಹಿಸುತ್ತಿವೆ. ಇವು ತಮ್ಮ ತಮ್ಮ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕೆಲಸ ಮಾಡುತ್ತಿದ್ದರೂ ಕೂಡ ಈ ಬೆಂಗಳೂರು ನಗರ ಮಾತ್ರ ನಿಯೋಜಿತ ರೀತಿಯಲ್ಲಿ, ಯೋಜನಾಬದ್ಧವಾಗಿ ಕೆಲಸಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈ ಕಾರಣಕ್ಕೋಸ್ಕರವೇ ಹಿಂದೆ ಪೌರಾಡಳಿತ ಸಚಿವರಾಗಿದ್ದಂಥ ಮಾನ್ಯ ಧರ್ಮಸಿಂಗ್ ರವರು ಇದರ ಬಗ್ಗೆ ಸಮಗ್ರವಾಗಿ ಚಿಂತನೆಯನ್ನು ಮಾಡಿ ಒಂದು ಕರಡು ಅಧಿನಿಯಮವನ್ನು ರಚನೆ ಮಾಡಿದರು. ಅವರೇ ಇದನ್ನು ಸಿದ್ಧಮಾಡಿದರೂ ಕೂಡ ಅದನ್ನು ಜಾರಿಗೆ ತರುವುದಕ್ಕೆ ಅದರಿಂದಲೂ ಸಾಧ್ಯವಾಗಲಿಲ್ಲ. ಈಗ ಈ ಮಸೂದೆಯ ಅವಶ್ಯಕತೆ ಬಹಳ ಇರುವುದರಿಂದ ಮಾನ್ಯ ಸದಸ್ಯರೆಲ್ಲರೂ ಇದಕ್ಕೆ ತಮ್ಮ ಅನುಮೋದನೆಯನ್ನು ನೀಡಬೇಕೆಂದು ಪ್ರಪ್ರಥಮವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಳ–೩೦ ಪಿ. ಎಂ.

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅದರ ರಚನೆಯ ವಿಚಾರವನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಮೂರನೆಯ ಅಧಿನಿಯಮದಲ್ಲಿ ಹೇಳಿರುವಂತೆ ಅದರಲ್ಲಿ ೨೦ ಜನ ಸದಸ್ಯರು ಇರುತ್ತಾರೆ. ಎಲ್ಲಾ ಸ್ಥಳೀಯ ಸಲಹಾ ಸಂಸ್ಥೆಗಳು ಸೇರಿರುತ್ತವೆ. ಅದರ ಜೊತೆಗೆ ಹನ್ನೊಂದು ಜನ ಸ್ಥಳೀಯ ಸಂಸ್ಥೆಗಳಿಂದ, ಬೆಂಗಳೂರು ಮಹಾನಗರ ಪ್ರದೇಶ ಪ್ರಾಧಿಕಾರದಲ್ಲಿ ನೇಮಕವಾಗಿರತಕ್ಕಂಥ ಸದಸ್ಯರು ಇರುತ್ತಾರೆ. ಒಟ್ಟು ೩೧ ಜನ ಈ ಮಹಾ–ನಗರ ಪ್ರಾಧಿಕಾರದಲ್ಲಿ ಇರುತ್ತಾರೆ. ಅವರಿಗೆ ಹೆಚ್ಚು ಹೆಚ್ಚು ಅಧಿಕಾರವೂ ಇರುತ್ತದೆ ಎನ್ನುವ ವಿಚಾರವನ್ನು ಇದರಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ. ಅದರ ಜೊತೆಗೆ ಕಾರ್ಯಕಾರಿ ಸಮಿತಿಗಳನ್ನೂ ಕೂಡ ರಚನೆ ಮಾಡತಕ್ಕಂಥ ವಿಚಾರ ಇರುತ್ತದೆ. ಇದರಲ್ಲಿ ಹನ್ನೆರಡು ಜನ ಸದಸ್ಯರು ಇರತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಪ್ರಾಧಿಕಾರ ಇನ್ನಿತರ ಸಂಸ್ಥೆಗಳನ್ನು ನೇಮಕ ಮಾಡತಕ್ಕಂಥ ನಿಯಮವನ್ನು ಇದರಲ್ಲಿ ಅಳವಡಿಸಲಾಗಿದೆ. ಇದರಿಂದ ಮುಖ್ಯವಾಗಿ ಸರಿಯಾಗಿ ಇರತಕ್ಕಂಥ ಭಾಗವನ್ನು ಮೂರನೆಯ ಅಧ್ಯಾಯದಲ್ಲಿ ಹೇಳಿದ್ದೇವೆ. ಮತ್ತೆ ಬಂಭತ್ತನೆಯ ಅಧಿನಿಯಮಕ್ಕೆ ಒಳಪಟ್ಟಂತೆ ಪ್ರಾಧಿಕಾರದ ಅಧಿಕಾರಿಗಳು ಮತ್ತು ಪ್ರಕಾರ್ಯಗಳು:–(೧) ಈ ಅಧಿನಿಯಮದ ಉಪ ಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗೊಳಪಟ್ಟು ಪ್ರಾಧಿಕಾರದ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು, ಬೆಂಗಳೂರು ಮಹಾನಗರ ಪ್ರದೇಶದ ಸಮೀಕ್ಷೆ ನಡೆಸುವುದು ಮತ್ತು ಹಾಗೆ ನಡೆಸಲಾದ ಸಮೀಕ್ಷೆಗಳ ಬಗ್ಗೆ ವರದಿಗಳನ್ನು ಸಿದ್ಧಪಡಿಸುವುದು, ೨) ಬೆಂಗಳೂರು ಮಹಾ ನಗರ ಪ್ರದೇಶದ ಅಭಿವೃದ್ಧಿಗಾಗಿ ಒಂದು ರಚನಾ ವಿನ್ಯಾಸ ಯೋಜನೆಯನ್ನು ಸಿದ್ಧಪಡಿಸುವುದು, ೩) ರಚನಾ ವಿನ್ಯಾಸ ಯೋಜನೆಯಲ್ಲಿ ಆಲೋಚಿಸಲಾಗಿರುವಂಥ ಕಾಮಗಾರಿಗಳು ಕಾರ್ಯಗತವಾಗುವಂತೆ ಮಾಡುವುದು, ೪) ಬೆಂಗಳೂರು ಮಹಾನಗರ ಪ್ರದೇಶದ ರಚನಾ ವಿನ್ಯಾಸ ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯ ವಿರುವಷ್ಟು ಸ್ಕೀಮುಗಳನ್ನು ರೂಪಿಸುವುದು, ೫) ಸದರಿ ಸ್ಕೀಮುಗಳಿಗನುಸಾರವಾಗಿ ಪಟ್ಟಣ ಯೋಜನಾ ಸ್ಕೀಮುಗಳ ಮತ್ತು ಬಂಗಳೂರು ಮಹಾನಗರ ಪ್ರದೇಶದ ಅಭಿವೃದ್ಧಿ ಕಾಮಗಾರಿಗಳ ಕಾರ್ಯ ನಿರ್ವಹಣೆಯನ್ನು ಸುನಿಶ್ಚಿತಗೊಳಿಸುವುದು ಮತ್ತು ಸಮನ್ವಯಗೊಳಿಸುವುದು. ೬) ಬೆಂಗಳೂರು ಮಹಾನಗರ ಪ್ರದೇಶದ ಅಭಿವೃದ್ಧಿಯ ಸಲುವಾಗಿ ಯಾವುದೇ ಯೋಜನೆ ಅಥವಾ ಸ್ಕೀಮಿಗಾಗಿ ಹಣಕಾಸು ಸಂಗ್ರಹಿಸುವುದು ಮತ್ತು ಅಂಥ ಯೋಜನೆ ಅಥವಾ ಸ್ಕೀಮನ್ನು ಕಾರ್ಯಗತಗೊಳಿಸಲು ಪ್ರದೇಶದಲ್ಲಿರುವ ಸ್ಥಳೀಯ ಪ್ರಾಧಿಕಾರಿಗಳಿಗೆ ಸಹಾಯ ನೀಡುವುದು, ೭) ಯಾವ ಉದ್ದೇಶಗಳಿಗಾಗಿ ಪ್ರಾಧಿಕಾರವನ್ನು ರಚಿಸಲಾಯಿತೋ ಆ ಉದ್ದೇಶಗಳ ಮುಂದುವರಿಕೆಗಾಗಿ, ಸರ್ಕಾರದಿಂದ ವಹಿಸಿಕೊಡಬಹುದಾದ ಅಥವಾ ಅದಕ್ಕೆ ಅವಶ್ಯವಿರುವ ಯಾವುದೇ ವಿಷಯಗಳಿಗೆ ಅಗತ್ಯವಿರಬಹುದಾದ ಅಥವಾ ಅದಕ್ಕೆ ಅನುಷಂಗಿಕವಾದ ಅಥವಾ ಸಹಾಯಕವಾದ ಇತರ ಅಂಥ ಕೃತ್ಯಗಳನ್ನು ಮತ್ತು ಕೆಲಸಗಳನ್ನು ಮಾಡುವುದು. ೮) ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಯಾವುದೇ ಅಭಿವೃದ್ಧಿ ಯೋಜನೆ ಅಥವಾ ನಗರ ಯೋಜನೆ ಸ್ಕೀಮುಗಳ ಕಾರ್ಯ ನಿರ್ವಹಣೆಯ ಕೆಲಸವನ್ನು ಮಹಿಸಿಕೊಡುವುದು. ೯) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಲಿ, ಬೆಂಗಳೂರು ನಗರ ನಿಗಮ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನ ಮಂಡಲಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಸಂಬಂಧಪಡುವಷ್ಟರ ಮಟ್ಟಿಗೆ ಅಂಥ ಇತರ ಕಾರ್ಯಗಳ ಚಟುಗಟಿಕೆ

ಗಳನ್ನು ಸಮನ್ವಯಗೊಳಿಸುವುದು ಹೀಗೆ ಸುಮಾರು ಒಂಭತ್ತು ಅಂಶಗಳನ್ನು ಒಳಗೊಂಡ ಕಾರ್ಯ ಪಟ್ಟಿ ಕಾರ್ಯಕಾರಿ ಸಮಿತಿಗೆ ಅವರ ಅಧಿಕಾರ ವ್ಯಾಪ್ತಿಗೆ ಕೊಡಲಿಕ್ಕೆ ಇದು ಸರಿಯಾಗಿ ಇರತಕ್ಕಂಥ ಭಾಗ. ಬೆಂಗಳೂರು ಮಹಾ-ನಗರವು ಯಾವುದೇ ರೀತಿಯಲ್ಲಿ ಬೆಳೆಯುವ ಹಾಗೆ ಎಲ್ಲಾ ಕ್ರಮ ತೆಗೆದು ಕೊಳ್ಳುವ ಸಲುವಾಗಿ ಒಂದು ಮೇಲ್ಮಟ್ಟದ ಸಮಿತಿಯನ್ನು ರಚಿಸಿದ್ದು ಎಲ್ಲಾ ವಿಧವಾದಂಥ ಯೋಜನಾ ಬದ್ಧವಾಗಿರತಕ್ಕಂಥ ಕಾರ್ಯಕ್ರಮಗಳನ್ನು ರೂಪಿಸಿ ಆ ಕಾರ್ಯಕ್ರಮಗಳಿಗನುಸಾರವಾಗಿ ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಒಳಗಡೆ ಇರತಕ್ಕಂಥ ಇನ್ನಿತರ ಸಂಸ್ಥೆಗಳ ಸದಸ್ಯರು ಕೂಡ ನಿಯಮ ಗಳನ್ನು ಪಾಲಿಸಬೇಕಾದಂಥ ನಿಯಮಗಳು ಇದರಲ್ಲಿ ಇವೆ.

(SRI M. S. NARAYANA RAO IN THE CHAIR)

"This is an apex body which lays down policies for the regulated and planned development of Bangalore city and the policies so laid down by the apex authority shall be binding on all the other statutory authorities functioning within this region. This is the central point."

ಸನ್ಮಾನ್ಯ ಅಧ್ಯಕ್ಷರೇ ಹಣಕಾಸಿನ ವಿಚಾರದ ಬಗ್ಗೆ ಆಡಿಟ್ ಮಾಡುವುದು ಅದೆಲ್ಲಾ ಇದರಲ್ಲಿ ಮಾಡಿ ದ್ದೇವೆ ಮತ್ತೆ ಇನ್ನಿತರ ಎಂದರೆ ಕಾನೂನಿನಲ್ಲಿ ಇರತಕ್ಕಂಥ ಸಾಮಾನ್ಯ ವಿಷಯಗಳನ್ನೂ ಕೂಡ ಇದರಲ್ಲಿ ಕೊಡಲಾಗಿದೆ. ಸರ್ಕಾರಕ್ಕೆ ನಿಯೋಜನೆ ಮಾಡತಕ್ಕಂಥ, ಮತ್ತು ಇದರಲ್ಲಿ ಪ್ರಾಧಿಕಾರ ಸಣ್ಣಪುಟ್ಟ ರೆವಿನ್ಯೂ ಕೂಡ ಹಾಕತಕ್ಕಂಥ ಪವರ್‌ನ್ನೂ ಕೂಡ ಕೊಟ್ಟಿರತಕ್ಕಂಥದ್ದು ಇದೆ. ಮತ್ತೆ ವಿನಿಯಮ ಗಳನ್ನು ರೆಗ್ಯುಲರ್ ಮಾಡತಕ್ಕಂಥ ಅಧಿಕಾರವನ್ನು, ರೂಲ್ಸ್ ಮಾಡತಕ್ಕಂಥ ಅಧಿಕಾರವನ್ನು ಈ ಕಾನೂನಿನಲ್ಲಿ ಕೊಡಲಾಗಿದೆ. ಆದ್ದರಿಂದ ಕಾನೂನನ್ನು ತಂದಿರುವುದು ಸ್ವಲ್ಪ ತಡವಾಗಿರಬಹುದು. ಆದರೆ ಬಾಂಬೆ ಕಲ್ಕತ್ತಾ ಮದ್ರಾಸ್ ಮತ್ತಿತರ ಮಹಾನಗರಗಳಲ್ಲಿ ಇಂಥ ಒಂದು ಪ್ರಾಧಿಕಾರ ಹಲವಾರು ವರ್ಷಗಳಿಂದ ಅಸ್ತಿತ್ವಕ್ಕೆ ಬಂದು ಅವರ ಮಾರ್ಗದರ್ಶನದಲ್ಲಿ ಇತರ ಸ್ಥಳೀಯ ಸಂಸ್ಥೆಗಳು ಕೆಲಸ ಮಾಡಿ ಆಯಾ ಊರಿನ ಎಲ್ಲಾ ಪ್ರಗತಿ ಕಾರ್ಯಗಳನ್ನು ಕ್ರಮಬದ್ಧವಾಗಿ ನಿಯೋಜಿಸುತ್ತಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಮತ್ತು ಅದರಿಂದ ಅನುಕೂಲತೆಗಳನ್ನು ಪಡೆದಿದ್ದಾರೆ. ಆ ಮಹಾ-ನಗರಗಳಲ್ಲಿ ಇದೆಲ್ಲಾ ಸಾಧ್ಯವಾಗಿದೆ. ಆ ಕಾರಣದಿಂದ ಇದನ್ನು ನಾವು ತರುವುದು ನಿಧಾನವಾದರೂ ಕೂಡ ಈಗ ಇದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಆದ್ದರಿಂದ ಸನ್ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆ, ಬೆಂಬಲ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಆದಕ್ಕಾಗಿ ಒಂದು ಮಾತನ್ನು ಹೇಳತಕ್ಕಂಥದ್ದು ಇದೆ. ಇದರಲ್ಲಿ ದೋಷ ಇರಬಹುದು. ಈ ಪ್ರಪಂಚದಲ್ಲಿ ಮನುಷ್ಯ ಮಾಡತಕ್ಕಂಥ ಎಲ್ಲಾ ಕೆಲಸ ಗಳಲ್ಲಿಯೂ ದೋಷ ಇರುತ್ತದೆ. ಎಷ್ಟೇ ನಿಜವಾದ ಮನುಷ್ಯನಿದ್ದರೂ ಕೂಡ ದೋಷ ಲವಲೇಶ ವಾದರೂ ಇದ್ದೇ ಇರುತ್ತದೆ. ಈ ವಾದವನ್ನು ಸನ್ಮಾನ್ಯ ಸದಸ್ಯರೂ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಮನುಷ್ಯ ಎಷ್ಟೇ ಪ್ರಾಮಾಣಿಕವಾಗಿದ್ದರೂ ಕೂಡ ಕೃತಿಯಲ್ಲಿ ದೋಷ ಕಂಡು ಬರುತ್ತದೆ ಎನ್ನುವುದನ್ನೂ ಕೂಡ ತಾವು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಈ ಅನುಭವದ ಹಿನ್ನೆಲೆಯಲ್ಲಿ ತಪ್ಪುಗಳನ್ನು ಶಿದ್ದಿಕೊಳ್ಳತಕ್ಕಂಥ ವಿಷಯವನ್ನು ಮಾನ್ಯ ಸಭೆಯಮುಂದಿಟ್ಟು ಮೊದಲು ಈ ಕಾರ್ಯ ಪ್ರಾರಂಭ ಮಾಡೋಣ. ಅನಂತರ ಬಂದ ಅನುಭವದ ಹಿನ್ನೆಲೆಯಲ್ಲಿ ಬದಲಾವಣೆಯನ್ನು ಮಾಡತಕ್ಕಂಥದ್ದು ಕಂಡುಬಂದರೆ ಮಾಡೋಣ ಎನ್ನುವ ಒಂದು ಉದ್ದೇಶದಿಂದ ಈ ಕಾನೂನನ್ನು ಮಾಡುವುದಕ್ಕೆ ಹೊರಟಿದ್ದೇವೆ. ಈ ಉದ್ದೇಶದಿಂದ ಈ ಕಾನೂನನ್ನು ಜಾರಿಗೆ ತರುವುದರಲ್ಲಿ ತಪ್ಪಾಗುವುದಿಲ್ಲ. ಒಂದು ವೇಳೆ ಇದರಲ್ಲಿ ದಾರಿ ತಪ್ಪುವಂಥದ್ದೇನಾದರೂ ಕಂಡುಬಂದರೆ ಅವುಗಳನ್ನು ತಿದ್ದುವುದಕ್ಕೆ ಯಾವಾಗಲೂ ಅವಕಾಶವಿರುತ್ತದೆ. ತಾವು ಕೂಡ ಇದರ ಬಗ್ಗೆ ಸಹಕಾರ ನೀಡುತ್ತೀರಿ ಎನ್ನುವ ನಂಬಿಕೆ ನನಗೆ ಇದೆ. ಈ ಕಾನೂನನ್ನು ಮೊದಲನೆಯದಾಗಿ ಮಾಡುತ್ತಿದ್ದೇವೆ. ಆದ್ದರಿಂದ ತಾವು ಸಮಗ್ರವಾದ ದೃಷ್ಟಿಯಿಂದ ಇದನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಿಮ್ರತೆಯಿಂದ ಅರಿಕೆ ಮಾಡಿಕೊಂಡು, ಇದಕ್ಕೆ ಬೆಂಬಲ ಕೊಡಬೇಕೆಂದು ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಲಕ್ಷ್ಮೀಸಾಗರ್ ರವರು ಕೆಡೆಯಲ್ಲಿ ಮಾತನಾಡುತ್ತಾ ದೋಷ ಮನುಷ್ಯನಿಂದ ಹುಟ್ಟಿದ್ದುದು. ಯಾವುದೇ ಕಾರ್ಯ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮನುಷ್ಯ ಮಾಡಿದರೂ ಅದರಲ್ಲಿ ದೋಷ ಇರುತ್ತದೆ ಎನ್ನುವ ಒಂದು ಮಾತನ್ನು ಹೇಳಿದರು. ಮತ್ತೆ ಇನ್ನೊಂದು ಮಾತನ್ನು ಹೇಳುತ್ತಾ ಸಮಗ್ರವಾಗಿ ನೋಡಿದರೆ ಇದನ್ನು ಒಪ್ಪಿಕೊಳ್ಳುತ್ತಾರೆಂದೂ ಕೂಡ ಹೇಳಿದ್ದಾರೆ. ಅವರು ಹೇಳಿರುವ ರೀತಿಯಲ್ಲಿ ಮಾಡಬೇಕಲ್ಲ! ಸಮಗ್ರವಾಗಿ ಕಾರ್ಯತಃ ಇದನ್ನು ನೋಡಬೇಕೆಂದು ಸೇರಿಸಿಬಿಟ್ಟಿದ್ದಾರೆ. ಕಾರ್ಯತಃ ನೋಡಬೇಕೆಂದು ಹೇಳುವುದಾದರೆ ಚರ್ಚೆ ಏತಕ್ಕೆ ಮಾಡಬೇಕು ಎನ್ನುವ ಅಭಿಪ್ರಾಯ ಬರುತ್ತದೆ. ಶಾಸಕರಾಗಿರುವುದರಿಂದ ಎಲ್ಲಿ ದೋಷ ಇರುತ್ತದೆ ಎನ್ನುವುದನ್ನು ನಾವು ತೋರಿಸಬೇಕಾಗುತ್ತದೆ. ದೋಷ ಎಲ್ಲಿ ಇದೆ ಎನ್ನುವುದನ್ನು ತೋರಿಸಿದಾಗ ಅವರು ದೊಡ್ಡ ಮನಸ್ಸು ಮಾಡಿ ಕಪಿಮುಷ್ಟಿಯನ್ನು ಬಿಡಬೇಕು. ಏತಕ್ಕೆಂದರೆ ಅನೇಕ ಸಲ ಮಾನ್ಯ ಲಕ್ಷ್ಮಿಸಾಗರ್‌ರವರು ಗೊತ್ತಿರುವಹಾಗೆ ಅವರು ಹೇಳಿದ್ದೇ ವೇದವಾಕ್ಯ ಬೇರೆ ಯವರು ಹೇಳುವುದು ವಾಕ್ಯವೇ ಅಲ್ಲ. ಎಂಬ ಪ್ರವೃತ್ತಿ ವಕ್ತಪಡಿಸಿರುತ್ತಾರೆ. ಆರೀತಿ ಅಭಿಪ್ರಾಯ ವನ್ನು ಇಟ್ಟುಕೊಳ್ಳದೆ ಅವರೂ ಸಹ ನಾವು ಹೇಳುವುದರಲ್ಲಿ ಅರ್ಥವಿದೆ ಎನ್ನುವ ಅಭಿಪ್ರಾಯದಮೇಲೆ ತಮ್ಮ ದೋಷಗಳನ್ನು ತಿದ್ದುಕೊಳ್ಳುತಕ್ಕಂಥ ಮನೋಪ್ರವೃತ್ತಿಯನ್ನು ತೋರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ನಿಂತಿರತಕ್ಕಂಥದ್ದು ಇದನ್ನು ವಿರೋಧ ಮಾಡುವುದಕ್ಕಲ್ಲ. ಇಷ್ಟು ಹೇಳಿದರೂ ಸಹ ಮೂಲಭೂತವಾಗಿ ಈ ವಿಧೇಯಕ ಏನು ಇದೆ ಇದನ್ನು ಅನೇಕ ವರ್ಷಗಳಿಂದ ನಾವೂ ಕೂಡ ಒತ್ತಾಯ ಮಾಡುತ್ತಾ ಬರುತ್ತಲೇ ಇದ್ದೇವೆ. ಮತ್ತೆ ಈಗ ಈ ವಿಧೇಯಕ ಬರುತ್ತಿರುವುದು ಒಳ್ಳೆಯದೆಂದು ನಮ್ಮ ಅಭಿಪ್ರಾಯವಾಗಿದೆ. ಆದ್ದರಿಂದ ಇದನ್ನು ನಾವು ಸ್ವಾಗತ ಮಾಡುತ್ತೇವೆ. ಬೆಂಗಳೂರು ನಗರ ಬೃಹದಾಕಾರವಾಗಿ ಬೆಳೆಯುತ್ತಾ ಇದೆ. ಅದರಂತೆ ಜನಸಂಖ್ಯೆಯೂ ಕೂಡ ಜಾಸ್ತಿಯಾಗುತ್ತಾ ಹೋಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರೂ ಸಹ ಹೇಳಿದ್ದಾರೆ. ೫೦ ಕಿಲೋಮೀಟರ್ ಹೊರಗಡೆ ಗ್ರೀನ್ ಬೆಲ್ಟ್ ಎಂದು ಸಪರೇಟ್ ಮಾಡೋಣ ಎಂದು ಕೂಡ ಹೇಳಿದ್ದಾರೆ. ಆದ್ದರಿಂದ ಗ್ರೀನ್ ಬೆಲ್ಟ್ ಒಳಗೆ ಇರತಕ್ಕಂಥ ಜನರಿಗೆ ಸರಿಯಾದ ಸೌಕರ್ಯಗಳನ್ನು ಕಲ್ಪಿಸತಕ್ಕಂಥ ಜವಾಬ್ದಾರಿ ಸರ್ಕಾರದ್ದು ಇರುತ್ತದೆ. ಆದರೆ ಸರ್ಕಾರದವರು ತಮ್ಮ ಜವಾಬ್ದಾರಿ ಯನ್ನು ಸರಿಯಾದರೀತಿಯಲ್ಲಿ ನಿರ್ವಹಣೆ ಮಾಡುತ್ತಿಲ್ಲವೆಂಬ ಶಂಕೆ ಬರುತ್ತಿದೆ. ಬೆಂಗಳೂರು ಸುತ್ತ ಮುತ್ತಲೂ ಇರತಕ್ಕಂಥ ಬಿ.ಡಿ.ಎ.ಗೆ ಸೇರಿರತಕ್ಕಂಥ ಪ್ರದೇಶಗಳಲ್ಲಿ ರಸ್ತೆ ಇಲ್ಲ, ಸರಿಯಾದ ಒಳಚರಂಡಿ ಇಲ್ಲ, ನೀರಿನ ವ್ಯವಸ್ಥೆಯಿಲ್ಲ, ಲೈಟ್ ಮೆಂಟನೆನ್ಸ್ ಸರಿಯಾಗಿಲ್ಲ. ಇದೆಲ್ಲಾ ಅವ್ಯವಸ್ಥೆಗಳು ಇರುತ್ತವೆ ಡಿವ್ಯಾಂಡ್ ಬಂದಾಗ ಇದರ ಬಗ್ಗೆ ಮಾತನಾಡುತ್ತೇನೆ. ಬಿ.ಡಿ.ಎ. ಒಂದು ಹೊಲಸು ಸಂಸ್ಥೆಯಾಗಿದೆ ಎಂದು ಈಗಾಗಲೇ ಅನೇಕ ಸಲ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಇಷ್ಟು ಮಾತ್ರವೇ ಅಲ್ಲ. ಬೆಂಗಳೂರು ಮಹಾ-ನಗರ ಪಾಲಿಕೆಗೆ ಹೊಸದಾಗಿ ಚುನಾವಣೆಗಳಾದಮೇಲೆ ಸ್ವಲ್ಪಮಟ್ಟಿಗೆ ಚುನಾಯಿತ ಸದಸ್ಯರು ಬಂದಮೇಲೆ ಕೆಲಸ ನಡೆಯುತ್ತಿದೆ ಎಂದರೆ, ಅಲ್ಲೂ ಸಹ ಕೋ-ಆರ್ಡಿನೇಷನ್ ನಿಂದ ಕೆಲಸ ನಡೆಯುತ್ತಿಲ್ಲ. ಅಧಕ್ಷತೆಯನ್ನು ಅಲ್ಲಿಯೂ ಕೂಡ ನಾವು ನೋಡುತ್ತಿದ್ದೇವೆ. ಇನ್ನು ಮೂರನೆಯದು ಎಂದರೆ, ಬಹಳ ತಾಪತ್ರಯ ಕೊಡತಕ್ಕಂಥ ಅಧ್ವಾನದ ಸಂಸ್ಥೆ ಎಂದರೆ ಕೆ. ಇ. ಬಿ. ಕರ್ನಾಟಕ ರಾಜ್ಯದಲ್ಲಿ ಇದಕ್ಕಿಂತಲೂ ಅಧ್ವಾನದ ಸಂಸ್ಥೆ ಬೇರೆ ಯಾವುದೂ ಇಲ್ಲ, ಲೈಟು ಹಾಕುವುದಿಲ್ಲ, ಸರಿಯಾದ ವ್ಯವಸ್ಥೆ ಇಲ್ಲ. ಮೊನ್ನೆ ನಾನು ಮಾತನಾಡಿದ್ದೇನೆ, ಆದ್ದರಿಂದ ಇದರ ಬಗ್ಗೆ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಕೆ. ಎಸ್. ಆರ್. ಟಿ. ಸಿ. ಯನ್ನು ಪುನರುಜ್ಜೀವನಗೊಳಿಸುವುದಕ್ಕೆ ಶ್ರೀಮಾನ್ ಸಿಂಧ್ಯರವರು ಪ್ರಯತ್ನ ಮಾಡುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಬೆಂಗಳೂರಿನಲ್ಲಿ ಒಂದೊಂದು ಇಲಾಖೆಗೂ ಪರಸ್ಪರ ಸಾಮರಸ್ಯ ಇಲ್ಲ, ಯಾರೋ ಗುಂಡಿ ತೋಡುತ್ತಾರೆ, ಯಾರೋ ರೋಡ್ ಮಾಡುತ್ತಾರೆ. ಒಂದು ನಿದರ್ಶನ ಕೊಡಬೇಕೆಂದರೆ, ಮೊನ್ನೆ ವೆಸ್ಟ್ ಆಫ್ ಕಾರ್ಡ್ ರೋಡಿನಲ್ಲಿ ಹೊಸ ರಸ್ತೆಗೆ ಟಾರ್ ಹಾಕಿದ್ದಾರೆ. ವಾಟರ್ ಸಪ್ಲೈ ಬೋರ್ಡಿನವರು ತಾವು ಹಾಕಿದ ಲೈನು ಲೀಕ್ ಆಗುತ್ತಿದೆ, ಬೇರೆ ಲೈನ್ ಹಾಕಬೇಕೆಂದು, ಆ ರಸ್ತೆಯನ್ನು ಒಡೆದಿದ್ದಾರೆ. ಇದರಿಂದ ಏನು ಪ್ರಯೋಜನ ? ಕಂಟ್ರಾಕ್ಟರ್‌ಗೆ ಕೆಲಸ ಮತ್ತು ಜನರಿಗೆ ತೊಂದರೆ ವಿನಹ ಬೇರೆ ಏನೂ ಇಲ್ಲ. ಪ್ಯಾಚ್‌ಪ್ಯಾಚ್ ವರ್ಕ್ಸ್ ಆಗುತ್ತದೆ ಹೊರತು ಬೇರೆ ಏನೂ ಇಲ್ಲ. ಬೆಂಗಳೂರು ವಾಟರ್ ಆಂಡ್ ಸೂರೇಜ್ ಬೋರ್ಡಿನವರಿಗೂ ಮತ್ತು ಬೆಂಗಳೂರು ನಗರ ಕಾರ್ಪೋರೇಷನ್‌ನವರಿಗೂ ಪರಸ್ಪರ ಕೋ-ಆರ್ಡಿನೇಷನ್ ಇಲ್ಲ, ಬೆಂಗಳೂರು ನಗರ ಕಾರ್ಪೋರೇಷನ್‌ನವರಿಗೂ ಬಿ. ಡಿ. ಎ. ನವರಿಗೂ ಕೋ-ಆರ್ಡಿನೇಷನ್ ಇಲ್ಲ. ಬೆಂಗಳೂರಿನ ಅನೇಕ ಕಡೆಗಳಲ್ಲಿ ಇನ್ನೂ ಕೂಡ ಒಳಚರಂಡಿ ವ್ಯವಸ್ಥೆ ಇಲ್ಲ. ಬಿ. ಡಿ. ಎ. ಅವರನ್ನು ಕೇಳಿದರೆ, ಬೆಂಗಳೂರು ನಗರ ಕಾರ್ಪೋರೇಷನ್‌ನವರು ತೆಗೆದುಕೊಂಡಿದ್ದಾರೆ, ನಾವು ಏನು ಮಾಡುವುದಕ್ಕೆ ಸಾಧ್ಯ? ಎನ್ನುತ್ತಾರೆ. ಕಾರ್ಪೋರೇಷನ್‌ನವರನ್ನು ಕೇಳಿದರೆ ಬಿ. ಡಿ. ಎ. ಹತ್ತಿರ ಇದೆಯೆಂದು ಹೇಳುತ್ತಾರೆ, ಒಟ್ಟಿನಲ್ಲಿ ಇವರುಗಳಲ್ಲಿ ಪರಸ್ಪರ ಕೋಆರ್ಡಿನೇಷನ್ ಇಲ್ಲದೆ ಬಹಳ ತಾಪತ್ರಯ ಆಗಿಬಿಟ್ಟು ಜನತೆ ಮಾತ್ರ ಪರಿತಾಪ ಪಡುತ್ತಿದ್ದಾರೆ. ಆದ್ದರಿಂದ ಈ ಕೋ-ಆರ್ಡಿನೇಷನ್ ಬೇಕು ಎಂಬುದು ಎಲ್ಲರ

ಅಭಿಪ್ರಾಯ ಈ ದೃಷ್ಟಿಯಿಂದ ಇದನ್ನು ಸ್ವಾಗತ ಮಾಡಬೇಕಾಗಿದೆ. ಇದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಆದರೆ ಪ್ರಶ್ನೆ ಏನು ಬರುತ್ತದೆ ಎಂದರೆ, ಈ ತರಹ ಮೆಟ್ರೋಪಾಲಿಟಿನ್ ರೀಜಿನಲ್ ಡೆವಲಪ್ ಮೆಂಟ್ ಅಥಾರಿಟಿ, ಬೊಂಬಾಯಿ, ಡೆಲ್ಲಿ ಮತ್ತು ಕಲ್ಕತ್ತಾ ನಗರಗಳಲ್ಲಿ ಇದೆ. ಡೆಲ್ಲಿಯಲ್ಲಿ ಮಾತ್ರ ನಾನು ಹೋಗಿ ನೋಡಿದ್ದೇನೆ. ಕಲ್ಕತ್ತಾ, ಬೊಂಬಾಯಿಯಲ್ಲಿ ನೋಡಿಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರು ಹೋಗಿ ನೋಡಿಕೊಂಡುಬಂದಿದ್ದಾರೆ ಎಂದು ತಿಳಿದಿದ್ದೇನೆ ನನಗೆ ತಿಳಿದು ಬಂದಿರುವಂತೆ ಡೆಲ್ಲಿಯಲ್ಲಿ ಇದು ಸುಮಾರಾಗಿ ನಡೆಯುತ್ತಿದೆ. ಕಲ್ಕತ್ತಾ ನಗರ ಅತೀ ದೊಡ್ಡ ಸಮಸ್ಯೆಯನ್ನು ಎದುರಿಸುತ್ತಿದ್ದು, ಈ ಮೆಟ್ರೊಪಾಲಿಟಿನ್ ಅಥಾರಿಟಿ ಬಂದಮೇಲೆ ಸ್ವಲ್ಪಮಟ್ಟಿಗೆ ಇವುಗಳನ್ನು ನಿವಾರಣೆ ಮಾಡಲಿಕ್ಕೆ ಪ್ರಯತ್ನ ಮಾಡಲಾಗಿದೆ ಎಂಬುದು ನಮಗೆ ತಿಳಿದುಬಂದಿರುವ ವಿಷಯ ಆದ್ದರಿಂದ ಈಗ ಇದರಲ್ಲಿ ಭಿನ್ನಾಭಿಪ್ರಾಯ ಏನೂ ಇಲ್ಲ. ಈ ಬೋರ್ಡ್ ಇರಬೇಕು, ಆದರೆ ಇದರಲ್ಲಿ ಛೇರ್ಮನ್ನರು ಯಾರು ಹೇಗೆ ಎಂದು ಪ್ರಶ್ನೆ ಬರುತ್ತದೆ. ಈಗ ನಮ್ಮ ಬಿ ಡಿ. ಎ. ನಲ್ಲಿ ನಿವೃತ್ತರಾದ ಒಬ್ಬ ಅಧಿಕಾರಿಯನ್ನು ತಂದು ಕೂಡಿಸಿಬಿಟ್ಟಿದ್ದಾರೆ. ಏನೇನು ಆಗುತ್ತದೆಯೋ ಗೊತ್ತಿಲ್ಲ. ಇದರ ಬಗ್ಗೆ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ, ಸಂತೋಷದ ಸುದ್ದಿ ಎಂದರೆ, ಅಧ್ಯಕ್ಷರಾಗಿರುವ ಮುಖ್ಯಮಂತ್ರಿಗಳು ಮೂರು ತಿಂಗಳಿಗೊಂದು ಸಲ ಸಭೆ ಸೇರಬೇಕು ಎಂದು ಇದೆ. ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ಸೇರಿದರೆ ಸ್ವಲ್ಪಮಟ್ಟಿಗಾದರೂ ಬೆಂಗಳೂರು ನಗರದ ಪರಿಸ್ಥಿತಿ ಉತ್ತಮವಾಗಲಿಕ್ಕೆ ಅವಕಾಶ ಆಗಬಹುದು. ಇದನ್ನು ಮೆಟ್ರೋಪಾಲಿಟಿನ್ ಅಥಾರಿಟಿ ಮಾಡಿದ್ದಕ್ಕೂ ಸಾರ್ಥಕ ಆಗಬಹುದು. ಆದರೆ ಅವರು ಡೆಲ್ಲಿ, ಬೊಂಬಾಯಿ ಎಂದು ಕಾರ್ಯ ನಿಮಿತ್ತವಾಗಿ ಓಡಾಡಿ ಬೇರೆ ಸಭೆಗಳಲ್ಲಿ ಇದ್ದು, ಇಲ್ಲಿ ಇಲ್ಲವಾದರೆ ಪ್ರಯೋಜನ ಆಗುವುದಿಲ್ಲ. ಆಗ ಇದು ಕೂಡ ಒಂದ್ ಬಿ. ಡಿ, ಎ. ತರಹ ಆಗಿಬಿಡುತ್ತದೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಭರವಸೆ ಕೊಡಬೇಕು, ಮಾನ್ಯ ಲಕ್ಷ್ಮೀಸಾಗರ್ ಅವರು ಕೊಟ್ಟರೆ ಆಗುವುದಿಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರು ಇದಕ್ಕೆ ಉಪಾಧ್ಯಕ್ಷರಾದರೂ, ಬೆಳಿಗ್ಗಿನಿಂದ ರಾತ್ರಿವರೆಗೂ ಇದೇ ಕೆಲಸ ಮಾಡುವ ಜನ. ಅವರಿಗೆ ಬೇರೆ ಕೆಲಸವೇ ಇಲ್ಲ. ಆದರೆ ಮುಖ್ಯಮಂತ್ರಿಗಳು ಕೆಲಸ ಮಾಡುತ್ತಾರೆಯೇ ಎನ್ನುವುದು ಪ್ರಶ್ನೆ. ತಾವು ಹಾಗೆ ಮಾಡದೇ ಹೋದರೆ ಆನಾಹುತ ಆಗುತ್ತದೆ. ಇಲ್ಲಿ ಕೋ–ಆರ್ಡಿನೇಷನ್ ಬರುವುದಿಲ್ಲ. ಒಬ್ಬ ಅಧಿಕಾರಿಯನ್ನು ಕಂಡರೆ ಇನ್ನೊಬ್ಬ ಅಧಿಕಾರಿಗೆ ಆಗುವುದಿಲ್ಲ. ಒಬ್ಬರಮೇಲೆ ಒಬ್ಬರು ಕತ್ತಿ ಮಸೆಯುತ್ತಿರುತ್ತಾರೆ. ಗೊಂದಲಮಯ ವಾತಾವರಣಕ್ಕೆ ಅವಕಾಶ ಮಾಡಿಕೊಟ್ಟಹಾಗೆ ಆಗುತ್ತದೆ. ಏಕೆಂದರೆ ಮುಖ್ಯ ಮಂತ್ರಿಗಳು ಗೊಂದಲಮಯ ವಾತಾವರಣಕ್ಕೆ ಅವಕಾಶ ಮಾಡಿಕೊಟ್ಟಹಾಗೆ ಆಗುತ್ತದೆ. ಏಕೆಂದರೆ ಮುಖ್ಯ ಮಂತ್ರಿಗಳು ಬರದೇ ಹೋದರೆ ವೈಸ್‌ಚೇರ್ಮನ್ ಇರುತ್ತಾರೆ ಎಂದು ತಾವು ಹೇಳಬಹುದು. ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಇದಕ್ಕೆ ವೈಸ್‌ಚೇರ್ಮನ್ನರು. ಆದರೆ ಮುಖ್ಯಮಂತ್ರಿಗಳು ಇದ್ದಾಗ ಈ ಅಧಿಕಾರಿಗಳು ಒಂದು ರೀತಿಯಯಾಗಿ ನಡೆದುಕೊಳ್ಳುತ್ತಾರೆ ಮತ್ತು ಬೇರೆಯವರು ಇದ್ದಾಗ ಬೇರೆ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ಇಲ್ಲಿ ಅನೇಕ ದೊಡ್ಡ ದೊಡ್ಡ ಅತಿರಥಮಹಾರಥರು ಇದ್ದಾರೆ. ಕರ್ನಾಟಕ ರಾಜ್ಯ ವಿಧಾನಮಂಡಲದ ನಾಲ್ವರು ಸದಸ್ಯರಿದ್ದಾರೆ. ನಾಲ್ಕುಜನ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸ್ಥಳೀಯ ಸಂಸ್ಥೆಗಳನ್ನು ಪ್ರತಿನಿಧಿಸುವವ್ಯಕ್ತಿಗಳಿದ್ದಾರೆ. ಅನುಸೂಚಿತ ಜಾತಿ ಮತ್ತು ಬಡಕಟ್ಟುಗಳನ್ನು ಪ್ರತಿನಿಧಿಸುವ ಮೂವರು ಸದಸ್ಯರಿದ್ದಾರೆ. ಮೇಯರ್ ಅವರು ಒಬ್ಬರು ಒಟ್ಟು ೩೨ ರಲ್ಲಿ ೧೨ ಜನ ನಾನ್ ಆಫಿಷೀಯಲ್ಸ್ ಆಗುತ್ತಾರೆ. ೨೦ ಜನ ಆಫಿಷಿಯಲ್ಸ್ ಆಗುತ್ತಾರೆ. ಹನ್ನೆರಡು ಜನ ನಾನ್ ಆಫಿಸಿಯಲ್ಸ್ ಸೇರಿ ಕೆಲಸ ಮಾಡಿದರೆ, ನನಗನ್ನಿಸುತ್ತದೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯತೆ ಇದೆ. ಶಾಸಕರನ್ನು ಆರಿಸುವಾಗ ಸರಿಯಾಗಿ ನೋಡಿ ಕೊಡಿ. ಆಮೇಲೆ ಲೇಬರ್ ರೆಪ್ರೆಸೆಂಟೇಷನ್ ಕೊಡುವಾಗ ಸರಿಯಾಗಿ ನೋಡಬೇಕು. A man who represents the working class, a man who is working among them, a person who knows their problems, not a person who is anti-working class always working against the working class... ಇಂಥವರಿಗೆ ಕೊಡಬೇಕೇ ವಿನಹ, ಇದು ಬಿಟ್ಟು ಇದಕ್ಕೆ ವಿರುದ್ಧವಾಗಿರುವವರನ್ನು ಹಾಕಿದರೆ ಮರ್ಯಾದೆ ಬರುವುದಿಲ್ಲ, ಗುರಿ ಮುಟ್ಟುವುದಕ್ಕೆ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. It goes against the principle of the whole thing. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಕಾರ್ಮಿಕ ವರ್ಗವನ್ನು ಪ್ರತಿನಿಧಿಸುವವರು ಎಂದರೆ ಸರಿಯಾದವರನ್ನು ನೋಡಿ ಹಾಕಬೇಕು. ಅಂಥವರನ್ನೇ, ಇಂಥವರನ್ನೇ ಹಾಕಬೇಕೆಂದು ನಾನು ಹೇಳುವುದಿಲ್ಲ. ಒಟ್ಟು ಈ ಪ್ರಾಧಿಕಾರದಲ್ಲಿ ೩೨ ಜನ ಇದ್ದಾರೆ. ಇವರು ಯಾರು ಯಾರು ಇದ್ದಾರೆಂದರೆ, ಮುಖ್ಯಮಂತ್ರಿಯವರು ಅಧ್ಯಕ್ಷರಾಗಿದ್ದಾರೆ, ನಗರಾಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಿಯೂ, ಬಿ. ಡಿ. ಎ. ಚೇರ್ಮನ್, ಬೆಂಗಳೂರು ನಗರಸಭೆ ಮೇಯರ್, ಸರ್ಕಾರದ ಮುಖ್ಯ ಕಾರ್ಯದರ್ಶಿ, ಡಿವಿಜಲ್ ಕಮಿಷನರ್ ಬೆಂಗಳೂರು ವಿಭಾಗ, ಹಣಕಾಸು ಇಲಾಖೆಯ ಕಾರ್ಯದರ್ಶಿ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ,

ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿ ಬೆಂಗಳೂರು ನೀರು ಸರಬರಾಜು ಮಂಡಳಿಯ ಅಧ್ಯಕ್ಷರು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು, ರಾಜ್ಯ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷರು, ನಗರ ಯೋಜನಾ ನಿರ್ದೇಶಕರು, ಹೀಗೆ ಎಲ್ಲಾ ಒಟ್ಟು ೩೨ ಜನರನ್ನು ಹಾಕಿದ್ದಾರೆ. ಆದರೆ ಅದೇ ಸಮಯಕ್ಕೆ ಕ್ಲಾಸ್ ೨ ರಲ್ಲಿ ಲೋಕಲ್ ಅಥಾರಿಟಿ ಎನ್ನುವ ಬಗ್ಗೆ ಏನು ಹೇಳಿದ್ದಾರೆಂದರೆ.....

SRI A. LAKSHMISAGAR.—I am accepting your first amendment.

SRI M. S.KRISHNAN.—Then the problem is solved.

SRI A. LAKSHMISAGAR.—Your second and third amendments I am not accepting because you are asking both the Commssioner of BDA and the Commissioner of Bangalore City Corporation to be there on the Board. Whereas the opinion amongst us is that the Chairman of the BDA and the Mayor of the Corporation should be there. Therefore, I am not accepting your other amendments.

SRI M. S. KRISHNAN.—I have not come to my amendments yet. I thing you should have an open mind. Iam very sorry, it looks to me that you have no open mind.

SRI A. LAKSHMISAGAR.—I said only to minimise the time. When I said I am accepting the first amendment, I considered it in the light of the overall situation of the provisions of the Bill under consideration. So I said, I am accepting it In other matters I have said I have considered them. I got the amendment some hours before. I have consulted my department and others. Whatever I have said I stand by that, there is no question of keeping an open mind. I always keep an open mind. If I ask my learned friend Mr. M. S.Krishnan whether he has an open mind on political theory, I don't say he must agree. There are certain areas where you keep your mind and I keep my mind.

SRI M.S. KRISHNAN.—I am glad that atleast he has given the advice. Such an advice was given by him because he is a minister and I am a member. There are two differences. The basic difference is, he is a minister trying to bring out a legislation, whereas we are members here. Before he makes up his mind he has to hear us. I have heard him very patiently and other members also. The minister is well within his rights. I have no objection.

Coming to Clauses (c) and (d) of sub-clause-3 of Clause (3), I suggest in addition to the Mayor of the Corporation, the Commissioner of the Corporation shall be added. Similarly. in addition to the Chairman of the BDA, the Commissioner of the BDA shall be added. It is not in substitution. This is in addition to the Mayor and the Chairman, BDA. Why I am suggesting is, I have

several times seen the Chairman doesn't agree with the Commissioner or the Commissioner doesn't agree with the Chairman and thus the whole thing goes by default. I would request the hon. Minister to reconsider this point.

Then, Clause (10) reads as follows :

"Not with standing anything contained in any law for the time being in force, except with the previous permission of the Authority, no authority or person shall undertake any development within the Bangalore Metropolitan Region of the types as the Authority may from time to time specify, by notification published in the official Gazette."

The word "authority" without capital 'A', I take it as local authority which has been referred to in Clause 2(j). If that is not so, then the word 'local' should be added.

MR. VICE CHAIRMAN.—It is as defined in Clause 2(a).

SRI M.S. KRISHNAN.—If local authority is there, then I don't press for the amendment.

Then in Clause No. 19, I suggest that after the words "Bangalore Water Supply and Sewerage Board", the words "The Karnataka State Road Transport Corporation, The Karnataka Electricity Board" shall be added.

SRI A. LAKSHMISAGAR.—Clause 19, I am accepting it.

SRI M.S. KRISHNAN.—Then I have nothing to say.

SRI A. LAKSHMISAGAR.—The BDA Commissioner and also the Corporation Commissioner find a place in the Executive Committee.

†ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ (ಗುರುಮಿಟ್‌ಕಲ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್ ಅವರು ಇಲ್ಲಿ ಮಂಡನೆ ಮಾಡಿರುವಂತಹ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಎಲ್ಲರೂ ಸ್ವಾಗತ ಮಾಡಬಹುದು. ಈ ಹಿಂದೆ ನಮ್ಮ ಸರ್ಕಾರ ಕೂಡ ಇದರ ಬಗ್ಗೆ ಯೋಚನೆ ಮಾಡಿ, ಇಂಥಾದ್ದೇ ಒಂದು ಮಸೂದೆಯನ್ನು ತರಬೇಕೆಂದು ನಿರ್ಣಯ ತಗೆದುಕೊಂಡಿತ್ತು. ಆ ಒಂದು ಸಂದರ್ಭದಲ್ಲಿ ಇಡೀ ದೇಶದಲ್ಲಿರತಕ್ಕಂಥ ಎಲ್ಲಾ ದೊಡ್ಡ ದೊಡ್ಡ ಪಟ್ಟಣಗಳಿಗೆ ಈ ಸದನದ ಅನೇಕ ಮಾನ್ಯ ಸದಸ್ಯರು ಭೇಟಿ ಕೊಟ್ಟು ಬಂದರ

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಒಂದು ಕೆಲಸ ಆಗಬೇಕೆಂಬುದನ್ನು ಈ ಹಿಂದಿನ ಸರ್ಕಾರವೇ ಒಪ್ಪಿಕೊಂಡಿತ್ತು. ಆದರ ಪ್ರಕಾರ ಇವೊತ್ತಿನ ದಿವಸ ಮಾನ್ಯ ಲಕ್ಷ್ಮೀಸಾಗರ್ ಅವರು ಈ ಒಂದು ಮಸೂದೆಯನ್ನು ಈ ಸದನದ ಮುಂದೆ ಮಂಡನೆ ಮಾಡಿದ್ದಾರೆ. ಇದರಲ್ಲಿ ಮುಖ್ಯಮಂತ್ರಿಗಳನ್ನೇ ಇದರ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಇದರ ಬಗ್ಗೆ ನಾನು ಹೇಳತಕ್ಕಂಥದ್ದು ಇಷ್ಟೆ, ಮುಖ್ಯ ಮಂತ್ರಿಗಳಿಗೆ ಅನೇಕ ಕೆಲಸಕಾರ್ಯಗಳಿರುತ್ತವೆ. ಅವರಿಗೆ ಇರುವಂತಹ ಅನೇಕ ಕೆಲಸಕಾರ್ಯಗಳಲ್ಲಿ ಇದಕ್ಕೂ ಗಮನ ಕೊಡುವುದು ಕಷ್ಟವಾಗುತ್ತದೆ. ಈ ಪ್ರಾಧಿಕಾರದ ಸಭೆಗಳಲ್ಲಿ ಮುಖ್ಯಮಂತ್ರಿಗಳು ಭಾಗವಹಿಸುವುದಕ್ಕೆ ಸಾಧ್ಯವಾಗದಿದ್ದಾಗ ಮಾನ್ಯ

ಕೃಷ್ಣನ್ ಅವರು ಹೇಳಿದ ಪ್ರಕಾರ ನಗರಾಭಿವೃದ್ಧಿ ಇಲಾಖೆಯ ಮಂತ್ರಿಗಳೇ ಪ್ರಾಧಿಕಾರದ ಸಭೆಗಳಲ್ಲಿ ಭಾಗವಹಿಸಬೇಕಾಗುತ್ತದೆ. ಉಪಾಧ್ಯಕ್ಷರಾಗಿ ಇವರು ಸಭೆಗಳಲ್ಲಿ ಭಾಗವಹಿಸಿದರೆ ಏನು ತೊಂದರೆ ಯಾಗುತ್ತದೆ ಎಂಬುದನ್ನು ನೋಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ಮೆಟ್ರೊ

ಶ್ರೀ-೦೦ ಪಿ.ಎಂ.

ಪಾಲಿಟನ್ ಕಮಿಟಿಗೆ ಛೇರ್ಮನ್ನರಿದ್ದು ಸುಮಾರು ೧೫-೨೦ ಜನ ಸದಸ್ಯರು ಅಂದರೆ ಫೈನಾನ್ಸ್ ಸೆಕ್ರೆಟರಿ, ಹೌಸಿಂಗ್ ಬೋರ್ಡ್ ಸೆಕ್ರೆಟರಿ, ಕಾರ್ಪೊರೇಷನ್ ಮೇಯರ್, ಹೌಸಿಂಗ್ ಬೋರ್ಡ್ ಛೇರ್ಮನ್ ಹಾಗೂ ಇನ್ನೂ ಅನೇಕ ಜನ ಸದಸ್ಯರು ಇರುತ್ತಾರೆ. ಈ ಕಮಿಟಿಯಲ್ಲಿ ಮುಖ್ಯ ಮಂತ್ರಿಯವರು ಛೇರ್ಮನ್ನರಾಗಿದ್ದಾರೆ. ಮುಖ್ಯ ಮಂತ್ರಿಗಳವರಿಗೆ ಬೇಕಾದಷ್ಟು ಕೆಲಸ ಈಗಾಗಲೇ ಇರುವುದರಿಂದ ಅವರಿಗೆ ಈ ಕಮಿಟಿಯೆಲ್ಲೂ ಕೆಲಸವನ್ನು ನೋಡಿಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಆದುದರಿಂದ ಕಾನೂನು ಮತ್ತು ವಸತಿ ಇಲಾಖೆಯ ಮಂತ್ರಿಗಳಾದ ನೀವೇ ಈ ಕಮಿಟಿಗೆ ಛೇರ್ಮನ್ನರಾಗಿದ್ದರೆ ಬಹಳ ಒಳ್ಳೆಯದೆಂದು ಕಾಣಿಸುತ್ತದೆ. ನೀವೇ ಛೇರ್ಮನ್ನರಾಗಿದ್ದರೆ ಆಗಾಗ್ಗೆ ಮೀಟಿಂಗ್ ಗಳನ್ನು ಕರೆದು ಏನೇನು ಕೆಲಸ ಮಾಡಬೇಕೆಂಬುದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಯವರಿಗೆ ಸಮಯ ಸಿಗುವುದಿಲ್ಲವೆಂದು ೬ ತಿಂಗಳಿಗೆ ಒಂದು ಸಲವೋ ೧ ವರ್ಷಕ್ಕೆ ಒಂದು ಸಲವೋ ಮೀಟಿಂಗನ್ನು ಕರೆದರೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಆದುದರಿಂದ ಈ ಕಮಿಟಿಗೆ ನೀವೇ ಛೇರ್ಮನ್ನರಿದ್ದುಕೊಂಡು ಕೆಲಸ ಮಾಡುವುದು ಒಳ್ಳೆಯದೆಂದು ನನ್ನ ಸಲಹೆ. ಇನ್ನು ಎರಡನೆಯದಾಗಿ ಈ ಕಮಿಟಿಯಲ್ಲಿ ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ ಲೇಬರ್ ಮತ್ತು ಮಹಿಳೆಯರಿಗೆ ಆದ್ಯತೆ ಕೊಡಲು ಈ ಕೋಮುಗಳಿಂದ ಒಟ್ಟು ೩ ಜನರನ್ನು ನೇಮಕ ಮಾಡಲಾಗುವುದೆಂದು ತಿಳಿಸಿದ್ದೀರಿ. ೩ ಜನ ಇರುವ ಕಡೆ ೪ ಜನರನ್ನು ಮಾಡಿದರೆ ಒಳ್ಳೆಯದೆಂದು ನನ್ನ ಸಲಹೆ. ಇಲ್ಲದಿದ್ದರೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹಾಗೂ ಮಹಿಳೆಯರ ಸಮುದಾಯಕ್ಕೆ ಬಹಳ ಅನ್ಯಾಯವಾಗುತ್ತದೆ ಎಂದು ಕಾಣಿಸುತ್ತದೆ. ೩ ಜನ ಇದ್ದ ಸದಸ್ಯರ ಬಲವನ್ನು ೪ ಜನಕ್ಕೆ ಮಾಡಬೇಕೆಂದು ನಾನು ಆಗ್ರಹಪಡಿಸುತ್ತೇನೆ. ಆಮೇಲೆ ಈ ಕಮಿಟಿಗೆ ೪ ಜನ ಲೆಜಿಸ್ಲೇಟರುಗಳನ್ನು ಅಪಾಯಿಂಟ್ ಮಾಡಬೇಕೆಂದು ಇದರಲ್ಲಿ ಇದೆ. ಈ ೪ ಜನ ಲೆಜಿಸ್ಲೇಟರುಗಳಲ್ಲಿ ಒಬ್ಬರು ಕಂಪಲ್ಸರಿಯಾಗಿ ಷೆಡ್ಯೂಲ್ಡ್ ಕ್ಯಾಸ್ಟ್ ಸದಸ್ಯರು ಒಬ್ಬರು ಇರಬೇಕೆಂದು ಮಾಡಬೇಕು. ಇದನ್ನು ಕಡ್ಡಾಯವಾಗಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಇಲ್ಲದೇ ಹೋದರೆ ಷೆಡ್ಯೂಲ್ಡ್ ಕ್ಯಾಸ್ಟ್ ಗ್ರೂಪ್‌ಗೆ ಬಹಳ ಅನ್ಯಾಯವಾಗುತ್ತದೆ. ಇದನ್ನು ಈಗಲೇ ಮಾಡುವುದು ಒಳ್ಳೆಯದು. ನಿಮ್ಮ ಸಲಹೆಯನ್ನು ಪರಿಶೀಲನೆ ಮಾಡಿ ಮುಂದಕ್ಕೆ ಬೇಕಾದರೆ ಮಾಡುತ್ತೆ ಎಂದು ಹೇಳಬಾರದು. ಮುಂದೆ ಮಾಡುತ್ತೇವೆಂದು ಹೇಳಿದರೆ ಅದು ಖಂಡಿತ ಆಗದ ಮಾತಾಗುತ್ತದೆ. ಆದುದರಿಂದ ಈ ಸಾರಿ ಮಾಡುವ ಕಮಿಟಿಯಲ್ಲೇ ಒಬ್ಬರು ಷೆಡ್ಯೂಲ್ಡ್ ಕ್ಯಾಸ್ಟ್ ಲೆಜಿಸ್ಲೇಟರನ್ನು ಅಪಾಯಿಂಟ್ ಮಾಡಬೇಕೆಂದು ನಾನು ಹೇಳುತ್ತೇನೆ. ಇದನ್ನು ದಯವಿಟ್ಟು ಮಾಡಬೇಕು. ಮೆಟ್ರೊ ಪಾಲಿಟನ್ನು ಬೋರ್ಡ್ ಯಾವುದಾದರೂ ಒಂದು ನಿರ್ಣಯವನ್ನು ಪಾಸ್ ಮಾಡಿದಾಗ ಆ ನಿರ್ಣಯವನ್ನು ಪುನಃ ರಿವಿಷನ್ ಬೋರ್ಡ್ ಮುಂದೆ ಬಂದು ಅದು ಚರ್ಚೆಯಾಗಬೇಕಾದರೆ ಆ ನಿರ್ಣಯವನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸ ಬಹುದು ಎಂದು ಕಾನೂನನ್ನು ಮಾಡಿದ್ದೀರಿ. ಇದು ಸರಿಯಲ್ಲ. ಎಲ್ಲಾ ಇಲಾಖೆಯ ಸೆಕ್ರೆಟರಿಗಳು ಮತ್ತು ಮೇಯರ್ ಹಾಗೂ ಶಾಸಕರು ಮಾಡಿದಂತಹ ನಿರ್ಣಯವನ್ನು ರಿವಿಷನ್ ಬೋರ್ಡ್ ಮುಂದೆ ತರಿಸಿಕೊಳ್ಳುವುದು ಸರಿಯಲ್ಲ. ಸರ್ಕಾರದವರು ಬೇಕಾದರೆ ಆ ನಿರ್ಣಯವನ್ನು ತರಿಸಿ ನೋಡುವುದು ಒಳ್ಳೆಯದು. ಅದು ಬಿಟ್ಟು ಅದನ್ನು ಕಾನ್ಸಲ್ ಮಾಡುವುದು ಸರಿಯಲ್ಲ. ಇದರಿಂದ ಸರ್ಕಾರವು ಮೆಟ್ರೊಪಾಲಿಟನ್ ಬೋರ್ಡ್ ಅಂಗೀಕರಿಸಿದ ನಿರ್ಣಯಕ್ಕೆ ಇಂಟರ್‌ಫಿಯರೆನ್ಸ್ ಮಾಡಿದಹಾಗೆ ಆಗುತ್ತದೆ. ಆದುದರಿಂದ ಈ ರಿವಿಷನ್ ಬೋರ್ಡ್‌ನ್ನು ಇಟ್ಟುಕೊಳ್ಳಬಾರದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಮತ್ತೆ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ೪ ಜನ ಲೆಜಿಸ್ಲೇಟರ್‌ಗಳನ್ನು ಈ ಬೋರ್ಡ್‌ಗೆ ಅಪಾಯಿಂಟ್ ಮಾಡುವಾಗ ಒಬ್ಬರು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಅವಕಾಶ ಮಾಡಿ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ತಂದಿರುವ ವಿಧೇಯಕಕ್ಕೆ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ನಾನು ಇಷ್ಟಪಡುತ್ತೇವೆ. ಈ ಬೆಂಗಳೂರು ನಗರ ಬೃಹತ್

ಆಗಿ ಮತ್ತು ವೇಗವಾಗಿ ಹಾಗೂ ನಾನಾ ಮುಖವಾಗಿ ಬೆಳೆಯುತ್ತಿದೆ. ಈರೀತಿ ನಗರ ಬೆಳೆಯುವುದನ್ನು ತಡೆದು ವ್ಯವಸ್ಥಿತವಾಗಿ ಬೆಳೆಯುವುದಕ್ಕೆ ಕಾನೂನುಗಳನ್ನು ಮಾಡಬೇಕು, ಆದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ನಗರ ಬೆಳೆಯುವ ಬಗ್ಗೆ ಮೂಲಭೂತವಾದ ಸಮಸ್ಯೆ ಏನು ಎಂದು ಸರ್ಕಾರ ಅರ್ಥಮಾಡಿಕೊಂಡಿಲ್ಲವೆಂದು ಕಾಣುತ್ತದೆ. ಇದರ ಬಗ್ಗೆ ನನ್ನ ಅನಿಸಿಕೆಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ನಗರವನ್ನು ಎಲ್ಲಾ ರೀತಿಯಲ್ಲಿ ಸರಿಯಾಗಿ ಇಟ್ಟುಕೊಳ್ಳಬೇಕೆಂದು ಕಾರ್ಪೋರೇಷನ್‌ಗಳನ್ನು ಮಾಡಿರುತ್ತೇವೆ. ಒಳ ಚರಂಡಿ ಮಂಡಳಿಯನ್ನು ಮಾಡಿರುತ್ತೇವೆ ಜಲ ಮಂಡಳಿಯನ್ನು ಮಾಡಿರುತ್ತೇವೆ ವಿದ್ಯುಚ್ಛಕ್ತಿ ಮಂಡಳಿಯನ್ನು ಮಾಡಿರುತ್ತೇವೆ. ಹೀಗೆ ಅನೇಕ ಮಂಡಳಿಗಳನ್ನು ಮಾಡಿ ನಗರವನ್ನು ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತೊಂದು ಸಾರಿ ಈ ಎಲ್ಲಾ ಬೋರ್ಡ್‌ಗಳು ಸ್ವತಂತ್ರವಾಗಿರುವುದರಿಂದ ಸರಿಯಾದ ಕೆಲಸವಾಗುವುದಿಲ್ಲ. ಇವುಗಳನ್ನೆಲ್ಲಾ ಸೇರಿಸಿ ಸಮನ್ವಯ ಮಾಡಿ ಒಂದೇ ಆಡಳಿತದ ಕೇಂದ್ರದಲ್ಲಿ ತರಬೇಕೆಂದು ಮಾಡುತ್ತೇವೆ. ಸಮನ್ವಯ ಮಾಡಬೇಕು. ನಿಜ. ಆದನ್ನು ನಾನು ಒಪ್ಪುತ್ತೇನೆ. ಈಗ ಮಾಡಿರುವ ಬೋರ್ಡ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೇ ? ಸರಿಯಾಗಿ ಕೆಲಸ ಮಾಡದೇ ಇರುವುದಕ್ಕೆ ಕಾರಣಗಳು ಏನು ? ಒಂದಕ್ಕೊಂದು ಬೋರ್ಡ್‌ಗಳು ಹೊಂದಿಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ ? ಈ ಬೋರ್ಡ್‌ಗಳು ಒಂದಕ್ಕೊಂದು ಹೊಂದಿಕೊಂಡು ಸಮರ್ಪಕವಾಗಿ ಕೆಲಸ ಮಾಡದೇ ಇರುವುದರಿಂದ ಈ ರೀತಿ ಸಮನ್ವಯ ಮಾಡುವುದಕ್ಕೆ ವಿಧೇಯಕವನ್ನು ತಂದಿದ್ದೇವೆಂದು ಹೇಳಿದ್ದಾರೆ. ಬಿ.ಡಿ.ಎ., ಕೆ.ಎಸ್.ಆರ್.ಟಿ.ಸಿ., ಹೀಗೆ ನಾನಾ ತರಹ ಬೋರ್ಡ್‌ಗಳನ್ನು ಮಾಡಿ ಅವುಗಳಿಗೆ ಸ್ವತಂತ್ರ ಆಡಳಿತವನ್ನು ಕೊಟ್ಟಾಗಲೂ ಅವುಗಳು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದರೆ ಅವುಗಳಮೇಲೆ ನಿಯಂತ್ರಿತ ಕ್ರಮಗಳನ್ನು ತೆಗೆದುಕೊಂಡು ಸರಿಯಾಗಿ ಕೆಲಸಮಾಡುವ ಹಾಗೆ ಬೋರ್ಡ್‌ಗಳನ್ನು ಅಭಿವೃದ್ಧಿಮಾಡುವ ಕಡೆ ತಾವು ಗಮನಕೊಡ ಕೊಡಬೇಕು. ಆದು ಬಿಟ್ಟು ಈ ಬೋರ್ಡ್‌ಗಳನ್ನು ಸಮನ್ವಯ ಮಾಡಿದರೆ ಒಳ್ಳೆಯ ಕೆಲಸವಾಗುತ್ತದೆಂದು ತಿಳಿದುಕೊಂಡಿದ್ದರೆ ಆದು ತಪ್ಪಾಗುತ್ತದೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಈ ರೀತಿ ಇವರು ಸಮನ್ವಯ ಮಾಡುವುದರಿಂದ ಯಾವುದೇ ರೀತಿಯ ಪ್ರಗತಿ ಯಾಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಸಮನ್ವಯ ಸಮಿತಿಯನ್ನು ಮಾಡುವುದಕ್ಕೆ ಮೊದಲು ಇವರು ಮೂಲಭೂತವಾಗಿ ಯೋಚನೆ ಮಾಡಬೇಕಾಗಿತ್ತು. ಇವರು ಮಾಡಿರುವ ಬೋರ್ಡಿನ ಮೂಲಕ ಒಳ್ಳೆಯ ಕೆಲಸಗಳು ಆಗುತ್ತವೆಯೋ ಇಲ್ಲವೋ ಎಂದು ಶಂಕೆ ವ್ಯಕ್ತವಾಗುತ್ತಿದೆ. ಈಗಿರುವ ಬೋರ್ಡ್‌ಗಳನ್ನೇ ಸರಿಯಾದ ರೀತಿಯಲ್ಲಿ ವ್ಯವಸ್ಥೆಗೊಳಿಸಿದರೆ ಸಾಕಾಗುತ್ತಿತ್ತು ಎಂದು ನನಗೆ ಕಾಣುತ್ತದೆ. ಇವರು ಮಾಡಿರುವ ಕಮಿಟಿಯಲ್ಲಿ ಯಾವ ರೀತಿಯ ಒಳ್ಳೆಯ ಕೆಲಸಗಳು ನಡೆಯುತ್ತವೆಯೋ ಎಂಬುದನ್ನು ಕಾದು ನೋಡಬೇಕಾಗುತ್ತದೆ ಇದನ್ನು ಸೂಪರ್ ಪಾರ್ಲಿಮೆಂಟ್ ತರಹ ಸೃಷ್ಟಿಮಾಡಿದ್ದೀರಿ ನಿಜ ಇದರಿಂದ ಏನಾದರೂ ಪ್ರಯೋಜನವಾಗುತ್ತದೆಯೇ ಎಂಬುದರಲ್ಲಿ ನನಗೆ ಅನುಮಾನ ಇದೆ. ಈ ಸಂಸ್ಥೆಯನ್ನು ಬಾಡಿ ಆಫ್ ಕೋ ಆರ್ಡಿನೇಷನ್ ಎಂದು ಜನರಲ್ ಆಬ್ಜೆಕ್ಟ್‌ನಲ್ಲಿ ಹೇಳಿದ್ದೀರಿ ಇದರಿಂದ ಬೇರೆ ಸಂಸ್ಥೆಗಳು ಇದರ ಪರ್ಮಿಷನ್ ಇಲ್ಲದೆಯೇ ಕೆಲಸ ಮಾಡುವ ಹಾಗೆಯೇ ಇಲ್ಲ. ಬಿಡಿಎನವರು ವಾಟರ್ ಸಪ್ಲೈ ಬೋರ್ಡಿನವರು ವಿದ್ಯುಚ್ಛಕ್ತಿಮಂಡಲಿಯವರು ಹೀಗೆ ಪ್ರತಿಯೊಬ್ಬರೂ ಈ ಪ್ರಾಧಿಕಾರದ ತೀರ್ಮಾನಕ್ಕೆ ಬದ್ಧರಾಗಿರಬೇಕಾಗುತ್ತದೆ. ಹೀಗೆ ಆದರೆ ಇವರ ಪ್ರಕಾರ ಅವರೆಲ್ಲ ಭಜನೆ ಮಾಡಿಕೊಂಡು ಇರಬೇಕಾಗುತ್ತದೆ ಪ್ರಾಧಿಕಾರದಲ್ಲಿ ತೀರ್ಮಾನವಾದಮೇಲೆ ನಮ್ಮ ಕೆಲಸ ಮಾಡೋಣ ಎಂದು ಮಂಡಲಿಗಳೆಲ್ಲರೂ ಯಾವ ಕೆಲಸವನ್ನೂ ಮಾಡದೆ ಕುಳಿತುಕೊಳ್ಳುತ್ತಾರೆ. ಇದರ ಮೀಟಿಂಗ್ ಆಗಬೇಕಾದರೆ ಮಾನ್ಯ ಮುಖ್ಯ ಮಂತ್ರಿಗಳು ಇರಬೇಕಾಗುತ್ತದೆ. ಇವರು ಮೀಟ್ ಮಾಡಿ ತೀರ್ಮಾನ ತೆಗೆದುಕೊಂಡು ಫೈಲ್ ಬಿಲ್ಡ್ ಆಫ್ ಮಾಡುವಷ್ಟರ ಹೊತ್ತಿಗೆ ದೊಡ್ಡ ಅನಾಹುತವೇ ಆಗಿರುತ್ತದೆ.

ಒಂದು ಒಬ್ಬಿಟಿಫಿಕೇಷನ್ ಕಮಿಟಿ ಎಂದು ಮಾಡಿದ್ದರು ಅದಕ್ಕೆ ಚೀಫ್ ಸೆಕ್ರೆಟರಿ ಚೇರ್ಮನ್ ಬೆಂಗಳೂರಿನ ಸುತ್ತ ಮುತ್ತ ಎರಡು ಮೈಲಿ ರೇಡಿಯಸ್‌ನಲ್ಲಿ ಯಾವುದೇ ದೊಡ್ಡ ಬಿಲ್ಡಿಂಗ್ ಬರಕೂಡದು ಎಂದು ತೀರ್ಮಾನ ತೆಗೆದುಕೊಳ್ಳುವ ಹೊತ್ತಿಗೆ ಎಷ್ಟೋ ಕಡೆಗಳಲ್ಲಿ ಆಂಥ ಕಟ್ಟಡಗಳಿಲ್ಲ, ಎದ್ದುಬಿಟ್ಟಿದ್ದವು ಇಂಥವುಗಳನ್ನು ಡಿಮಾಲ್ಲಿಷ್ ಮಾಡಲು ಅವಕಾಶವಿದೆ ಎಂದು ಹೇಳುತ್ತೀರಿ. ಆದರೆ ಎಷ್ಟು ಮಾಡಿದ್ದೀರಿ ಹೇಳಿ ? ನಿಮ್ಮ ಆಡಳಿತಕ್ಕೆ ತದ್ವಿರುದ್ಧವಾದ ಪರಿಣಾಮ ತರುವಂತ ಅಂಶ ಇದರಲ್ಲಿ ಹಲವಾರು ಇರುವುದರಿಂದ ನಾನು ನನ್ನ ಪ್ರಾಮಾಣಿಕ ಭಯವನ್ನು ವ್ಯಕ್ತಪಡಿಸಬೇಕಾಗಿದೆ. ಇಲ್ಲಿ ಒಂದು ಹೇಳಿದ್ದೀರಿ ಈ ಸಂಸ್ಥೆಯ ನಿರ್ಣಯ ಸಮಾಧಾನಪಾಗಿದ್ದರೆ ಆಂಥವರು ಸ್ಟೇಟ್ ಗವರ್ನಮೆಂಟ್‌ಗೆ ಅಪೀಲು ಹೋಗಬೇಕೆಂದು ಚೀಫ್ ಮಿನಿಸ್ಟರ್ ಅಧ್ಯಕ್ಷರು, ಅರ್ಬನ್ ಡೆವೆಲಪ್‌ಮೆಂಟ್ ಮಿನಿಸ್ಟರ್ ಉಪಾಧ್ಯಕ್ಷರಾಗಿರುವ ಸಂಸ್ಥೆ ತೀರ್ಮಾನ ಮಾಡಿದ ಮೇಲೆ ಗವರ್ನ

ಮೆಂಟಿಗೆ ಅಪೀಲು ಹೋಗಬೇಕೆಂದು ಹೇಳುವುದು ಹಾಸ್ಯಾಸ್ಪದವಾಗಿರುತ್ತದೆ ಈ ಇಬ್ಬರನ್ನು ಬಿಟ್ಟರೆ ಉಳಿಯುವ ಗವರ್ನ್‌ಮೆಂಟ್ ಎಂದರೆ ಯಾವುದು ಎಂದು ನಾನು ಕೇಳುವುದು ? Even it looks very odd. How do you sit on the judgment because you are already parties to that decision in the Metropolitan Authority. ಇವರು ಅಲ್ಲಿ ತೀರ್ಮಾನ ಮಾಡಿದಕ್ಕೆ ಯಾವ ರೀತಿ ಸರ್ಕಾರಕ್ಕೆ ಅಪೀಲು ಹೋಗುವುದಕ್ಕೆ ಸಾಧ್ಯವಾಗುತ್ತದೆಂಬುದು ನನಗೆ ಅರ್ಥವಾಗುತ್ತಿಲ್ಲ. ಇದು ಬಹಳ ಅಭಾಸವಾಗಿ ಕಾಣುತ್ತದೆ. ನೀವು ಎಷ್ಟೇ ಅಥಾರಿಟಿಗಳನ್ನು ಕ್ರಿಯೇಟ್ ಮಾಡಿದರೂ ಅನಧಿಕೃತ ಬಿಲ್ಡಿಂಗ್ಸ್ ಅನ್ನು ತಡೆಯಲು ಸಾಧ್ಯವಾಗಿದೆಯೇ ? ಬಿಗಿಯಾದ ಉಸ್ತುವಾರಿ ಆಲ್ಲದೆ ಆಗಿಂದಾಗ್ಗೆ ಯೋಜನೆಗಳನ್ನು ರೂಪಿಸದೆ ಸುಮ್ಮನೆ ಸಂಸ್ಥೆ ಕಟ್ಟುತ್ತಾ ಹೋದರೆ ನೀವು ಏನನ್ನು ಸಾಧಿಸಬಲ್ಲಿರಿ ?

ಯಾವುದೇ ಅಥಾರಿಟಿ ಇರಲಿ ಅದು ಒಂದು ಬಿಳಿಯಾನೆಯಾಗದಂತೆ ನೋಡಿಕೊಳ್ಳಬೇಕಾದರೆ ವ್ಯವಸ್ಥಿತವಾದ ಯೋಜನೆಗಳನ್ನು ಸಕಾಲದಲ್ಲಿ ತರುವುದು ಒಂದೇ ಇದಕ್ಕೆ ಮದ್ದು ಈಗಿರುವ ಕಾರ್ಪೋರೇಷನ್‌ಗಳು ಬೋರ್ಡ್‌ಗಳು ವ್ಯವಸ್ಥಿತವಾಗಿ ಕೆಲಸ ಮಾಡಿದ್ದಿದ್ದರೆ ಈ ರೀತಿ ತೊಂದರೆಯಾಗುತ್ತಿರಲಿಲ್ಲ, ಇಲ್ಲಿ ಇವರು ಯಾವುದೇ ಹೊಸ ಸ್ಕೀಮನ್ನೂ ಹಾಕ್ತಿಕೊಂಡಿಲ್ಲ. this is only suppose to co-ordinate ಈಗ ಇವರು ಏನುಮಾಡಿದ್ದಾರೆ ಎಂದರೆ ಕಲ್ಕತ್ತ ಡೆಲ್ಲಿ ಮುಂತಾದ ಜಾಗಗಳಲ್ಲಿರತಕ್ಕಂಥ ಕಾನೂನಿನ ಎಲ್ಲಾ ಕಲಮುಗಳನ್ನು ಜೋಡಿಸಿ ಈ ವಿಧೇಯಕವನ್ನು ಸಿದ್ಧ ಮಾಡಿರುವುದು ಎಂಬ ಅನುಮಾನ ಬರುತ್ತಿದೆ. ಬೇರೆ ರಾಜ್ಯಗಳಲ್ಲಿರತಕ್ಕಂಥ ಅನುಭವವೇ ಬೇರೆ: ಇಲ್ಲಿನದೇ ಬೇರೆ, ಇದನ್ನು ನೀವು ಸ್ಪಷ್ಟವಾಗಿ ಅರ್ಥಮಾಡಿಕೊಂಡು ವಿಚಾರ ಮಾಡಬೇಕಾಗಿತ್ತು, ಇದರ ಜೊತೆಗೆ ಬೇರೆ ರಾಜ್ಯಗಳು ಯಾವ ರೀತಿ ಈ ಅಥಾರಿಟಿ ಕೈಲಿ ಕೆಲಸ ಮಾಡಿಸುತ್ತಿವೆ ಎಂಬುದರ ಬಗ್ಗೆ ಒಂದು ಚಿತ್ರವನ್ನು ಕೊಟ್ಟಿದರೆ ನಾವು ಬಹಳ ಉಪಕೃತರಾಗುತ್ತಿದ್ದೆವು. ಇದರ ಬಗ್ಗೆ ಆದ್ದರಿಂದ ಹೆಚ್ಚಿನ ಚಿಂತನೆ ಆಗತ್ಯ.

ಶ್ರೀ ಆರ್. ವೆಂಕಟರಾಮಯ್ಯ.—ಇದರಲ್ಲಿ ಮಾಲೂರು ತಾಲ್ಲೂಕನ್ನು ಸೇರಿಸಿದ್ದೀರಿ. ಆದರೆ ಕೋಲಾರ ತಾಲ್ಲೂಕನ್ನು ಸೇರಿಸಬೇಕಾಗಿತ್ತು. ಏಕಕ್ಕೆಂದರೆ ಮಾಲೂರು ತಾಲ್ಲೂಕನ್ನು ನೋಡಿಕೊಳ್ಳುವ ಜವಾಬ್ದಾರಿಯೂ ಕೋಲಾರ ಡಿ.ಸಿ. ಯವರದ್ದೇ. ಆದ್ದರಿಂದ ಅವರೂ ಕೂಡ ಕಮಿಟಿಯಲ್ಲಿರಬೇಕಾಗಿತ್ತು. ಅದನ್ನು ಬಿಟ್ಟಿದ್ದೀರಿ. ಇನ್ನೊಂದನ್ನು ಶ್ರೀ ಕೆ.ಹೆಚ್. ಶ್ರೀನಿವಾಸರು ಚೆನ್ನಾಗಿ ಹೇಳಿದ್ದಾರೆ. ಇವರು ಈಗಾಗಲೇ ಸುಮಾರಾಗಿಯಾದರೂ ಕೆಲಸ ಮಾಡುತ್ತಿರುವ ಕಾರ್ಪೋರೇಷನ್ ಬೋರ್ಡ್‌ಗಳ ವ್ಯವಹಾರದಲ್ಲೂ ತಲೆಹಾಕಿ ಅದನ್ನು ತೊಡಕಿಗೆ ಸಿಕ್ಕಿಸುತ್ತಿದ್ದಾರೆ ಎಂದು. ನನ್ನ ಅಭಿಪ್ರಾಯವೂ ಇದೇ ಹಿಂದೆ ಇದನ್ನು ಸಮನ್ವಯ ಸಂಸ್ಥೆಯನ್ನಾಗಿ ಮಾಡಲಾಗುವುದೆಂದು ಮಂತ್ರಿಗಳು ಹೇಳಿದ್ದರು ಆದರೆ ಈಗ್ಗೆ ಹಾಗೆ ಮಾಡುತ್ತಿಲ್ಲ, ಬೆಂಗಳೂರು ಜಿಲ್ಲಾ ಪರಿಷತ್ತು ಹಾಗೂ ನಗರಪಾಲಿಕೆಗೂ ಏನು ಸಂಬಂಧ ಎಂಬುದನ್ನು ತಿಳಿಸಬೇಕಾಗಿತ್ತು, ಕೋಲಾರ ಬೆಂಗಳೂರಿಗೆ ತುಂಬಾ ಹತ್ತಿರದಲ್ಲಿರುವುದರಿಂದ ಅದನ್ನು ಇದಕ್ಕೆ ಸೇರಿಸಬೇಕು. ಶ್ರೀ ಮಹಮದ್ ಲಿಯಾಖಿದ್ದೀನ್ ಬುನ್ನಾ ಬುದ್ದೀನ್.—ಇನ್. ಕ್ಲಾಸ್ (ಸಿ)

It is mentioned that the mayor of the Bangalore City Corporation is only a member. He should not be made as a member only. The Mayor of the City Corporation should be the Vice Chairman and not the Commissioner. ಮನಸ್ಸಿನ ಪ್ರವೃತ್ತಿ ನನಗೆ ಒಬ್ಬನಿಗೆ ಮಾತ್ರ ಸೀಮಿತವಾಗಿಲ್ಲ ಎನ್ನುತಕ್ಕ ಮಾತನ್ನು ಹೇಳಿದರೆ ಅವರು ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ಭಾವಿಸುತ್ತೇನೆ. ಕೆಲವು ವಿಷಯಗಳಲ್ಲಿ ಮನಸ್ಸು ನಿರ್ಧಾರ ಮಾಡಿದಂತೆ ಮನಸ್ಸಿನ ಆದೇಶದಂತೆ ನಾವು ನಡೆದುಕೊಳ್ಳಬೇಕಾದ ಪ್ರಮೇಯ ಬರುತ್ತದೆ. ಮನಸ್ಸು ಸರಿಯಾಗಿ ಇಲ್ಲದಿದ್ದಾಗ ಮನುಷ್ಯ ಕಂಗಾಲಾಗುತ್ತಾನೆ. ಯಾವುದೋ ಒಂದು ಮಾನಸಿಕ ಚೌಕಟ್ಟು, ಸಮಯದ ಚೌಕಟ್ಟು, ವಿಷಯದ ಚೌಕಟ್ಟು, ಕೆಲಸದ ಚೌಕಟ್ಟು ಈ ರೀತಿಯಾಗಿ ಮನುಷ್ಯ ಒಂದು ಚೌಕಟ್ಟಿನ ಪರಿಧಿಯೊಳಗೆ ಕೆಲಸ ಮಾಡಬೇಕಾಗುತ್ತದೆ. ಸಾಮಾನ್ಯ ವಿಷಯಕ್ಕೂ ಸರಿಯಾದ ಒಂದು ಮನಸ್ಸಿನ ನಿರ್ಧಾರ ಇಲ್ಲದಿದ್ದರೆ, ಸಮಯ ಸಮಯಕ್ಕೂ ಮನಸ್ಸನ್ನು ಬದಲಾವಣೆ ಮಾಡುತ್ತಾ ಹೋದರೆ ಯಾವ ಒಂದು ಮಾನಸಿಕ ಆದೇಶಗಳನ್ನೂ ಕಾರ್ಯರೂಪಕ್ಕೆ ತರುವುದಕ್ಕಾಗುವುದಿಲ್ಲ. ಈಗ ನಾವು ತಂದಿರುವ ವಿಧೇಯಕವನ್ನು ಕಾರ್ಪೋರೇಷನ್‌ನವರು ಒಪ್ಪುತ್ತಾರೆ. ಇಂತಹ ಸ್ಥಳೀಯ ಸಂಸ್ಥೆಗಳು

ದೇಶದಲ್ಲಿ ಅನೇಕ ಇವೆ. ಸ್ಥಳೀಯ ಸಂಸ್ಥೆಗಳಲ್ಲಿ ದೋಷ ಇರುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ ಎಲ್ಲಾ ಸಂಸ್ಥೆಗಳಲ್ಲೂ ದೋಷಗಳು ಇದ್ದೇ ಇರುತ್ತವೆ. ಒಟ್ಟಿನಲ್ಲಿ ಜನಗಳಿಗೆ ಅನುಕೂಲವಾಗುವ ಹಾಗೆ ಕೆಲಸ ಮಾಡುವಂತಹ ಒಂದು ಸ್ಥಳೀಯ ಸಂಸ್ಥೆ ನಮ್ಮ ನಗರಕ್ಕೆ ಬೇಕಾಗಿದೆ, ಆದ್ದರಿಂದ ಇದನ್ನು ನಾವು ತಂದಿದ್ದೇವೆ. ಈಗಿರುವ ಎಲ್ಲಾ ಬೋರ್ಡ್‌ಗಳನ್ನು ಒಟ್ಟಿಗೆ ಸೇರಿಸಿ ಸಮನ್ವಯ ಮಾಡಿದರೆ ಕೆಲಸಗಳು ಸುಗಮವಾಗಿ ನಡೆದುಕೊಂಡು ಹೋಗುವುದಕ್ಕೆ ಸಹಾಯಕವಾಗಬಹುದು ಎಂಬುದು ನಮ್ಮ ಅನಿಸಿಕೆ. ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು ಈ ರೀತಿ ಎಲ್ಲಾ ಬೋರ್ಡ್‌ಗಳನ್ನು ಸಮನ್ವಯ ಮಾಡುವುದರಿಂದ ಕೆಲಸಗಳು ಏನು ಸರಿಯಾದ ರೀತಿಯಲ್ಲಿ ನಡೆಯುವುದಿಲ್ಲವೆಂಬ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ಸಮನ್ವಯ ಮಾಡುವುದಕ್ಕಿಂತ ಮುಂಚಿತವಾಗಿ ಇದರ ಸಾಧಕಭಾದಕಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಈ ವಿಧೇಯಕವನ್ನು ಸಿದ್ಧಪಡಿಸಬೆ ಕಾಗಿತ್ತೆಂದೂ ಸಹ ಸೂಚಿಸಿದ್ದಾರೆ. ಈಗ ಮಾಡುವ ಸಮನ್ವಯ ಸಂಸ್ಥೆಗಳಲ್ಲೂ ದೋಷ ಕಂಡು ಬರಬಹುದು ನಾನು ಇಲ್ಲ ಎನ್ನುವುದಿಲ್ಲ. ಈಗ ಹಾಲಿ ಇರುವ ಸಂಸ್ಥೆಗಳಲ್ಲಿ ಇರುವ ಕಳಂಕವನ್ನು ಮತ್ತು ಕಲ್ಮಶವನ್ನು ನಾವು ಕಣ್ಣಿಂದ ನೋಡಿ ಅದಕ್ಕೆ ಏನಾದರೂ ಪ್ರಾಯಶ್ಚಿತ ಮಾಡಬೇಕೆಂದು ಈ ವಿಧೇಯಕವನ್ನು ತಂದಿದ್ದೇವೆ. ಕೈಮಿಾರಿ ಹೋಗಿರುವ ಈಗಿನ ಪರಿಸ್ಥಿತಿಯನ್ನು ಹಾಗೆಯೇ ಬಿಟ್ಟರೆ ಇನ್ನೂ ದುರಾವಸ್ಥೆಗೆ ಹೋಗುವುದರಿಂದ ಇದಕ್ಕೆ ಸರಿಯಾದ ಒಂದು ರೀತಿಯಲ್ಲಿ ಕಡಿವಾಣ ಹಾಕಬೇಕೆಂದು ಇದನ್ನು ಮಾಡಿದ್ದೇವೆಯೇ ಹೊರತು ಬೇರೆ ಏನೂ ಇಲ್ಲ. ನಾವು ಮಾಡಿರುವ ಮೆಟ್ರೊಪಾಲಿಟನ್ ಸಮಿತಿಯಲ್ಲಿ ಎಲ್ಲಾ ರಂಗಗಳಲ್ಲೂ ಅನುಭವ ಇರುವವರನ್ನು ಸದಸ್ಯರನ್ನಾಗಿ ಮಾಡುತ್ತೇವೆ. ಈ ತರಹ ಕಮಿಟಿಯನ್ನು ಮೊದಲೇ ಮಾಡಬೇಕಾಗಿತ್ತು. ತಡವಾಗಿಯಾದರೂ ಆಯಿತಲ್ಲ ಎಂದು ಕಾರ್ಪೊರೇಷನ್ ಸದಸ್ಯರು ಹೇಳಿದ್ದಾರೆ. ಈ ವಿಧೇಯಕಕ್ಕೆ ಮಾನ್ಯ ಸದಸ್ಯರಾದ ಮುಲ್ಲಿಕಾರ್ಜುನ ಖಾರ್ಗೆಯವರು ೪ ತಿದ್ದುಪಡಿಗಳನ್ನು ಕೊಟ್ಟಿದ್ದಾರೆ, ಅದರಲ್ಲಿ ಎರಡು ತಿದ್ದುಪಡಿಗಳನ್ನು ಒಪ್ಪಿಕೊಡಿದ್ದೇನೆ. ಒಂದು ತಿದ್ದುಪಡಿಯನ್ನು ಅವರೇ ಬೇಡ ಎಂದು ಹೇಳಿದ್ದಾರೆ. ಇನ್ನೊಂದು ತಿದ್ದುಪಡಿಯಲ್ಲಿ ಈ ಸಮಿತಿಗೆ ಬಿ.ಡಿ.ಎ., ಕಮಿಷನರ್‌ರವರು ಮತ್ತು ಕಾರ್ಪೊರೇಷನ್ ಕಮಿಷನರ್‌ರವರನ್ನೂ ಇದರಲ್ಲಿ ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ಹೇಳಿದ್ದಾರೆ ಈಗಾಗಲೇ ಈ ಕಮಿಟಿಯಲ್ಲಿ ಬಹಳ ಜನ ಸದಸ್ಯರಾಗಿದ್ದಾರೆ, ಇನ್ನೂ ಹೆಚ್ಚಿಗೆ ಮಾಡುವುದು ಸೂಕ್ತವಲ್ಲ ವೆಂದು ನನ್ನ ಭಾವನೆ. ಈ ಕಮಿಟಿಯಲ್ಲಿ ಬೆಂಗಳೂರು ನಗರ ಕಾರ್ಪೊರೇಷನ್ ಮೇಯರ್‌ರವರು ಇರುತ್ತಾರೆ, ಬಿ.ಡಿ.ಎ., ಛೇರ್ಮನ್‌ರವರು ಇರುತ್ತಾರೆ. ಇವರುಗಳು ಇರುವಾಗ ಮತ್ತೆ ಅದೇ ಇಲಾಖೆಯ ರನ್ನು ನೇಮಕ ಮಾಡುವುದು ಸರಿಯಲ್ಲವೆಂದು ಕಾಣುತ್ತದೆ. ಮೇಯರ್‌ರವರು ಸರಿಯಾಗಿ ಕೆಲಸ ಮಾ ತುಪ್ಪದಿಲ್ಲ, ಬಿ.ಡಿ.ಎ. ಛೇರ್ಮನ್‌ರವರು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಒಂದು ಪಕ್ಷ ಬಿ.ಡಿ.ಎ. ಛೇರ್ಮನ್‌ರವರು ಸರಿಯಾಗಿ ಕೆಲಸ ಮಾಡಲಿಲ್ಲ ನೆಂದು ಇಟ್ಟುಕೊಳ್ಳಿ, ಆಗ ಅವರನ್ನು ಆ ಜಾಗದಿಂದ ತೆಗೆದುಹಾಕುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ಆಮೇಲೆ ಈ ಎಕ್ಸಿಕ್ಯೂಟಿವ್ ಕಮಿಟಿಯಲ್ಲಿ ಇಬ್ಬರು ಮಹಿಳೆಯರಿಗೆ ಸ್ಥಾನ ಇದೆ ಅದುದರಿಂದ ಅವರ ಬಗ್ಗೆ ಪ್ರೆಸ್ ಮಾಡಿಯಾರೆಂದು ಅವರಲ್ಲಿ ಮನವಿ ಮಾಡುತ್ತೇನೆ. ಇನ್ನು ಖಾರ್ಗೆಯವರು, ಈ ಸಮಿತಿಯಲ್ಲಿ ಮುಖ್ಯ ಮಂತ್ರಿಯವರನ್ನು ಛೇರ್ಮನ್ ಮಾಡಿದ್ದೀರಿ. ಈಗಾಗಲೇ ಮುಖ್ಯ ಮಂತ್ರಿಯವರಿಗೆ ಬೇಕಾದಷ್ಟು ಕೆಲಸವಿರುವುದರಿಂದ ಅವರು ಈ ಸಮಿತಿಯ ಮೀಟಿಂಗ್‌ಗಳಲ್ಲಿ ಭಾಗವಹಿಸಲು ಕಷ್ಟವಾಗಬಹುದು ಆದ್ದರಿಂದ ಅವರನ್ನು ಛೇರ್ಮನ್ ಮಾಡುವುದಕ್ಕಿಂತ ತಾವೇ ಛೇರ್ಮನ್ ಆಗಬಹುದೆಂದು ಸೂಚಿಸಿದ್ದಾರೆ. ಈ ಸಮಿತಿಯಲ್ಲಿ ಮುಖ್ಯ ಮಂತ್ರಿಗಳೇ ಛೇರ್ಮನ್ ಆಗಿರುತ್ತಾರೆ, ಅವರ ಪರವಾಗಿ ನಾನು ಅಲ್ಲಿ ಇರುವುದರಿಂದ ಯಾವ ತೊಂದರೆಯಾಗುವುದಿಲ್ಲ. ಯಾವುದಾದರೂ ತುಂಬಾ ಮುಖ್ಯವಾದ ವಿಷಯಗಳು ಇದ್ದಾಗ ಮಾತ್ರ ಮಾನ್ಯ ಮುಖ್ಯ ಮಂತ್ರಿಯವರು ಸಭೆಗೆ ಹಾಜರಾಗುತ್ತಾರೆ. ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು, ಈ ವಿಧೇಯಕವನ್ನು ನೀವು ಸ್ವಂತವಾಗಿ ತಂದಿರುವುದಲ್ಲ ಬೇಕ್ಕದ ರಾಜ್ಯಗಳಲ್ಲಿ ಅಂದರೆ ಮದ್ರಾಸ್, ಕಲ್ಕತ್ತಾ ನಗರಗಳಲ್ಲಿ ಜಾರಿಯಲ್ಲಿರುವ ಕಾನೂನುಗಳನ್ನು ನೋಡಿ ಇದನ್ನು ತಂದಿದ್ದೀರೆಂದು ಹೇಳಿದ್ದಾರೆ. ನಾನು ಅದನ್ನು ಅಲ್ಲಗಳೆಯುವುದಿಲ್ಲ. ನಮ್ಮ ದೇಶದ ಕಾನ್ಸ್ಟಿಟ್ಯೂಷನ್‌ನ್ನು ಯಾರು ಮಾಡಿದ್ದಾರೆ ? ಅವನ್ನೂ ಬೇರೆ ಬೇರೆ ದೇಶಗಳಲ್ಲಿ ಇದ್ದಂತಹ ಕಾನೂನುಗಳನ್ನು ಒಟ್ಟುಗೂಡಿಸಿ ಮಾಡಿದ್ದೆವು. ಎಲ್ಲವನ್ನೂ ಬೇರೆಯವರಿಂದ ನೋಡಿಯೇ ಕಲಿಯುವುದು. ಯಾರೂ ಸ್ವಂತವಾಗಿ ಕಲಿತುಕೊಂಡು ಬಂದಿರುವುದಿಲ್ಲ. ಎಲ್ಲಾ ಹಿಂದಿನವರ ಅನುಭವದ ಒಂದು ಮೂಟೆಯಿಂದಲೇ ನಾವು ತೆಗೆದುಕೊಂಡು ಕಲಿತಿರುವುದು. ಬೇರೆಯವರ ಅನುಭವದ ಆಧಾರದ ಮೇಲೆ ನಮ್ಮ ಅನುಭವವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಬ್ರಹ್ಮ ಒಬ್ಬನೇ ನೇರವಾಗಿ ಎಲ್ಲವನ್ನೂ ಸೃಷ್ಟಿ ಮಾಡಿದವನು. ಇನ್ನು ಮಿಕ್ಕ ಬೇರೆ ಎಲ್ಲರೂ ಇತರೆಯವರನ್ನು ನೋಡಿಕೊಂಡು ಕಲಿಯುವುದೇ ಹೆಚ್ಚು. ಬೇರೆಯವರಿಂದ ಕಲಿಯುವುದು ಮಹಾ ಅಪರಾಧವೇನಲ್ಲ. ಈ ಕಮಿಟಿಯಲ್ಲಿ ಅರ್ಬನ್ ಡೆವಲಪ್‌ಮೆಂಟ್ ಛೇರ್ಮನ್ ಮತ್ತು ಡೆಪ್ಯೂಟಿ ಛೇರ್ಮನ್‌ರು ಇರಬೇಕೆಂದು

ಹೇಳಿದ್ದಾರೆ. ಈಗ ಸಮಿತಿಯನ್ನು ಮಾಡಿದ್ದೇನೆ ಅದು ಹೇಗೆ ಕೆಲಸ ಮಾಡುತ್ತದೆಯೋ ನೋಡೋಣ ಆಮೇಲೆ ಬದಲಾವಣೆಗಳನ್ನು ಮಾಡುವ ಬಗ್ಗೆ ಯೋಚಿಸಬಹುದು ಮಾನ್ಯ ಮುಖ್ಯಮಂತ್ರಿಯವರು ಈ ಕಮಿಟಿಯಲ್ಲಿ ಮುಖ್ಯರಾಗಿರುತ್ತಾರೆ. ಅವರು ಬರದೇ ಇದ್ದ ಸಮಯದಲ್ಲಿ ಅರ್ಬನ್ ಡೆವೆಲಪ್‌ಮೆಂಟ್ ಮಿನಿಸ್ಟರ್ ಇರುತ್ತಾರೆ. ಮಾನ್ಯ ಖಾರ್ಗೆಯವರು, ಸದಸ್ಯರನ್ನು ನಾಮಿನೇಟ್ ಮಾಡುವಾಗ ಲೇಬರ್, ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ ಮತ್ತು ಮಹಿಳೆಯರ ಕಡೆಯಿಂದ ೩ ಜನ ಸದಸ್ಯರನ್ನು ನಾಮಕರಣ ಮಾಡುವಾಗ ೩ ಜನರ ಬದಲಾಗಿ ೪ ಜನರನ್ನು ನಾಮಿನೇಟ್ ಮಾಡಬೇಕೆಂದು ಹೇಳಿದ್ದಾರೆ. ಸಧ್ಯಕ್ಕೆ ೩ ಜನರನ್ನು ಮಾಡುತ್ತೇವೆ. ಮುಂದಕ್ಕೆ ಅಗತ್ಯ ಬಿದ್ದರೆ ೪ ಜನ ಸದಸ್ಯರನ್ನು ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗ ಅದನ್ನು ಅಮೆಂಡ್‌ಮೆಂಟ್ ಮಾಡದಿದ್ದರೆ ಅದನ್ನು ಆಮೇಲೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈಗಲೇ ಅಮೆಂಡ್ ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಮುಂದೆ ಅಗತ್ಯ ಬಿದ್ದರೆ ಖಂಡಿತಾ ಮಾಡುತ್ತೇನೆಂದು ಅವರಿಗೆ ಭರವಸೆ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈ ರೀತಿ ಭರವಸೆಗಳಿಂದ ಯಾವ ಕಾನೂನನ್ನು ಮಾಡುವುದಕ್ಕಾಗುವುದಿಲ್ಲ ಸ್ವಾಮಿ. ಲೇಬರ್, ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ ಮತ್ತು ಮಹಿಳೆಯರ ವಿಭಾಗದಿಂದ ೩ ಜನರನ್ನು ಹೇಗೆ ನಾಮಿನೇಟ್ ಮಾಡುತ್ತೀರಿ ? ೪ ವಿಭಾಗಗಳಿಂದಲೂ ೪ ಜನರನ್ನು ನೇಮಕ ಮಾಡಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಆಮೇಲೆ ೪ ಜನ ಲೆಜಿಸ್ಲೇಟರುಗಳನ್ನು ಈ ಕಮಿಟಿಯೊಳಗೆ ಸದಸ್ಯರನ್ನಾಗಿ ಮಾಡುತ್ತಿದ್ದೀರಿ. ಈ ಜನ ಲೆಜಿಸ್ಲೇಟರುಗಳಲ್ಲಿ ಒಬ್ಬರು ಷೆಡ್ಯೂಲ್ಡ್ ಕ್ಯಾಸ್ಟ್‌ನ ಸದಸ್ಯರಾಗಿರಬೇಕು. ಇಲ್ಲದಿದ್ದರೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆದುದರಿಂದ ಇದನ್ನು ನೀವು ಮಾಡಲೇ ಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಮಾಡಿರುವ ಸಮಿತಿಯಲ್ಲೇ ಸಾಕಷ್ಟು ಜನ ಸದಸ್ಯರು ಇದ್ದಾರೆ. ಇನ್ನೂ ಹೆಚ್ಚು ಸದಸ್ಯರನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು ಪಕ್ಷ ಇನ್ನೂ ಹೆಚ್ಚು ಸದಸ್ಯರು ಬೇಕಾಗಬಹುದು ಎಂದು ಕಂಡು ಬಂದರೆ ಆಗ ನೀವು ಕೊಟ್ಟಿರುವ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇನೆಂದು ಹೇಳುತ್ತೇನೆ. ಇದರಿಂದ ಎಲ್ಲಾ ಸರಿಯಾಗುತ್ತದೆ ಸರಿಯಾಗುವುದಿಲ್ಲವೆಂದು ತಾವು ತಿಳಿದುಕೊಳ್ಳಬಾರದು. ಈಗಾಗಲೇ ಸುಮಾರು ೩–೪ ಕಡೆಗಳಲ್ಲಿ ಇದೇ ರೀತಿಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ...

೫–೩೦ ಪಿ.ಎಂ.

ಶ್ರೀ ಎಂ. ವೀರಪ್ಪಮೊಯ್ಲಿ.—ಟೌನ್ ಪ್ಲಾನಿಂಗ್ ಮತ್ತು ಸಿ.ಐ.ಟಿ.ಬಿ.ಯ ಒರಿಜನಲ್ ಜೂರಿಸ್‌ಡಿಕ್ಷನ್‌ನಲ್ಲಿ ಇದೆಯಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ಮಾನ್ಯ ಸದಸ್ಯರಿಗೆ ಸಂಶಯ ಏತಕ್ಕೆ ? ನಾನು ಈ ವಿಷಯವನ್ನು ಅಧ್ಯಯನ ಮಾಡಲು ಬೊಂಬಾಯಿ, ಕಲ್ಕತ್ತಾ ಮತ್ತು ಮದ್ರಾಸ್ ನಗರಗಳಿಗೆ ಹೋಗಿ ಸುಮಾರು ಎರಡು ಮೂರು ದಿವಸಗಳು ಅಲ್ಲಿ ಇದ್ದು ಅವರು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆಂದು ತಿಳಿದುಕೊಂಡು ಬಂದು ಅದರ ಅನುಭವದ ಮೇರೆಗೆ ನಾವು ಇಲ್ಲಿ ಈ ಪ್ರಯತ್ನ ಮಾಡುತ್ತಿದ್ದೇವೆ. ಈ ಪ್ರಯೋಗದಲ್ಲಿ ಮೂಲಭೂತವಾಗಿ ವಿನಾದರೂ ಸಮಸ್ಯೆಗಳು ಬಂದರೆ ಪರಿಹಾರ ಮಾಡಿಕೊಳ್ಳುವುದಕ್ಕೆ ಸಾಧ್ಯತೆಗಳೂ ಸಹ ಇವೆ. ಆಗ ಮತ್ತೆ ನಾನು ತಮ್ಮ ಬಳಿ ಬರುತ್ತೇನೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಸಾಲ ಏತಕ್ಕೆ ಎಂದು ಕೇಳಿದ್ದಾರೆ. ಸ್ವಾಮಿ ಮದ್ರಾಸ್ ಸರ್ಕಾರದವರು ವಿಶ್ವಬ್ಯಾಂಕಿನಿಂದ ಸಾಲ ತೆಗೆದುಕೊಂಡು ಬಂದಿದ್ದಾರೆ. ಇದರಿಂದ ನಮಗೇನು ತೊಂದರೆಯಾಗುವುದಿಲ್ಲ. ಮತ್ತೆ ಮಾನ್ಯ ಸದಸ್ಯರಾದ ಆರ್. ವೆಂಕಟರಾಮಯ್ಯನವರು ಮಾತನಾಡುತ್ತಾ ಹೇಳಿದರು ನಮ್ಮ ಕೋಲಾರ ತಾಲ್ಲೂಕನ್ನು ಸಹ ಸೇರಿಸಿಕೊಳ್ಳಿ ಎಂದು ಕೋಲಾರ ತಾಲ್ಲೂಕನ್ನು ಸೇರಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ ಮಾಲೂರು ತಾಲ್ಲೂಕನ್ನು ಸೇರಿಸಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳಿರುತ್ತಾರೆ ತಾವಿರುತ್ತೀರಿ, ಆಗಿದ್ದರೂ ಮತ್ತೆ ಏತಕ್ಕೆ ರಿವ್ಯೂ ಮಾಡಬೇಕು ? ಇದು ಅಭಾಸವಲ್ಲವೇ ?

ಶ್ರೀ ಎ. ಲಕ್ಷ್ಮಿ ಸಾಗರ್.—ಇಲ್ಲಿ ಅರ್ಬನ್ ಡೆವಲಪ್‌ಮೆಂಟ್ ಸೆಕ್ರೆಟರಿಗಳು ಇರುತ್ತಾರೆ. ಲಾ ಡಿಪಾರ್ಟ್‌ಮೆಂಟ್ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇವೆ. At different capacities the power is being exercised. ಆದ್ದರಿಂದ ಇದು ಅಭಾಸವೇನೂ ಅಲ್ಲ. ಇಷ್ಟು ಮಾತ್ರ ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಲೀಗಲ್ ಇಲ್ಲ...Can a Sessions judge sit over the judgement of the High Court?

SRI. A. LAKSHMISAGAR.—I have considered all those points. You need not have any doubts. I have come to the conclusion after consulting the Law Department..

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ. ಈ ಈ ಶಾಸನ ಸಭೆಯಲ್ಲಿ ತಾವು ಕಾನೂನು ಮಾಡುವುದು. ಆದರೆ ತಾವು ನಮ್ಮನ್ನು ಕೇಳಬೇಕು. ಅದು ಬಿಟ್ಟು ಕಾನೂನು ಇಲಾಖೆಯಲ್ಲಿರುವಂತಹ ಬೃಹಸ್ಪತಿಗಳನ್ನು ಕೇಳಬೇಕಾದ ಅವಶ್ಯಕತೆ ಇಲ್ಲ. This is a supreme body. who is the appellate authority and who is the revising authority?

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ನಾನು ಬೃಹಸ್ಪತಿಯಲ್ಲ ನಾನು ಮಾಡುವುದಕ್ಕೆ ಬರುವುದಿಲ್ಲ. ನಾನು ಹೇಳುವುದನ್ನು ಸ್ವಲ್ಪ ದಯಮಾಡಿ ಕೇಳಿ.....

ಶ್ರೀ ಬಿ. ಬಸವಲಿಂಗಪ್ಪ.—ತಾವು ನಮ್ಮ ಸಲಹೆಯನ್ನು ಕೇಳಬೇಕು...This is supreme body. You must take a proper decesion. It is not your property You cannot say this. You represnt the Assembly...

SRI. A. LAKSHMISAGAR.—Don't I have that Liberty?

(ಗೊಂದಲ)

ಮಾನ್ಯ ಶ್ರೀನಿವಾಸ್‌ರವರು ಮಾತನಾಡುತ್ತಾ ಹೇಳಿದರು ಇದರ ಉದ್ದೇಶ ವಿರುದ್ಧವಾಗಬಹುದು ಎಂದು. ಆ ರೀತಿಯ ಸಂಶಯವೇನೂ ಮಾನ್ಯ ಸದಸ್ಯರಿಗೆ ಬೇಡ. ಇದರ ಉದ್ದೇಶ ಬಹಳ ಚೆನ್ನಾಗಿದೆ. ಬೇರೆ ರಾಜ್ಯಗಳಲ್ಲಿ ಮಾಡಿದ ಅನುಭವದ ಪ್ರಕಾರ ನಾವು ಇಲ್ಲಿ ಆದೇ ರೀತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬೇರೆ ರಾಜ್ಯಗಳಲ್ಲಿ ಇದರ ಅನುಕೂಲ ಪಡೆದುಕೊಂಡಿದ್ದಾರೆ. ಆದ್ದರಿಂದ ನಮಗೂ ಅನುಕೂಲವಾಹಬಹುದೆನ್ನುವ ನಂಬಿಕೆ ಇದೆ. ನಂಬಿ ಯಾರೂ ಕೆಟ್ಟವರಿಲ್ಲ ವೆಂದು ದಾಸರು ಪದ ಹೇಳಿದ ಹಾಗೆ ತಾವು ಇದನ್ನು ನಂಬಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗ ಇಲ್ಲಿ ಅಧ್ಯಕ್ಷರಾಗಿ ಮಾನ್ಯ ಮುಖ್ಯಮಂತ್ರಿಗಳು ಇರುವಾಗ ಅಲ್ಲಿ ಒಂದು ನಿರ್ಧಾರ ತೆಗೆದುಕೊಂಡ ಮೇಲೆ ಪುನಃ ಡೈರೆಕ್ಷನ್ ಮಾಡುವುದು ಏನು ಇದರಲ್ಲಿ ನಿವು ಹೇಳಿದ್ದೀರಿ, ಅದೇನಂದರೆ

> "State Government may give such directions to the authority as in its opinion are necessary or expedient for carrying out the purposes of this Act."

ಎಂದು ಹೇಳಿದ್ದೀರಿ. ಮತ್ತೆ ಡೈರೆಕ್ಷನ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಲಕ್ಷ್ಮೀಸಾಗರ್‌ರವರಿಗೆ ಕೊಡಬೇಕು. ಸೆಕ್ಷನ್ (೨೫) ಪ್ರಕಾರ ಆ ವಿಚಾರ ಇರುವುದಿಲ್ಲ. ತಾವು ಈ ಬಗ್ಗೆ ಸಮಗ್ರವಾಗಿ ಉತ್ತರ ಹೇಳಬೇಕು. ಇಲ್ಲದಿದ್ದರೆ ಇದರಲ್ಲಿ ಸಂಶಯಕ್ಕೆ ಆಸ್ಪದವಾಗುತ್ತದೆ.

SRI. K.H. SRINIVAS.—This has a seperate legal entity.

SRI. A. LAKSHMISAGAR.—The Minister or the Chief Miniiter exercises his authority in a different context. Both are seperate, This is all my submission.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಈ ವಿಧೇಯಕವನ್ನು ಮಂಡಿಸಿದಾಗ ಹೇಳಿದ್ದಕ್ಕೂ ಈಗ ಹೇಳುತ್ತಿರುವುದಕ್ಕೂ ತದ್ವಿರುದ್ಧವಾಗಿದೆ. ಇಲ್ಲಿ ಮಾನ್ಯ ಮಂತ್ರಿಗಳು ತಮ್ಮ ಕೆಪಾಸಿಟಿಯಲ್ಲಿ ವಾದವನ್ನು ಮಾಡುತ್ತಿದ್ದಾರೆ. ನಾನು ಹೇಳುತ್ತೇನೆ ಬೇರೆ ಬೇರೆ ಆಥಾರಿಟಿಗಳು ಇಲ್ಲಿ ಇರುವುದರಿಂದ ಸಂಶಯ ಬಂದಿದೆ. ಪ್ರಾಧಿಕಾರಗಳು, ಕಾರ್ಪೋರೇಷನ್ಸ್, ಬೋರ್ಡ್‌ಗಳು ಇವೆ. ಆದ್ದರಿಂದ ನಮಗೆ ಸಂಶಯ ಬಂದಿದೆ. ಇಲ್ಲಿ ತಾವು ಒಂದು ಮಾತು ಹೇಳಿದ್ದೀರಿ. ಅದೇನೆಂದರೆ any authority or person aggrieved ಇದರ ಬಗ್ಗೆ ಹೇಳುವುದಾದರೆ ಆಥಾರಿಟಿಯವರು ಸದಸ್ಯರಾಗಿದ್ದಾರೆ. ಪ್ರಾಧಿಕಾರದವರು ಸಹ ಇರುತ್ತಾರೆ. ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ ಮತ್ತು ನೀವು ಉಪಾಧ್ಯಕ್ಷರಾಗಿರುತ್ತೀರಿ ನೀವು ಒಂದು ನಿರ್ಧಾರ ಮಾಡಿದ ಮೇಲೆ ಮತ್ತೆ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡುವ ಅವಶ್ಯಕತೆ ಏನು ? ನಿಮಗೂ ಕೂಡ ಕೊನೆಯದಾಗಿ ಒಂದು ಅಧಿಕಾರ ಇರಬೇಕು. ಇದು ಅಷ್ಟು ಸರಿಯಾಗುವುದಿಲ್ಲ ಇದು ಅಪಕ್ವ. Government wants to reserve its authority to play any mischief of their choice.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ನಮ್ಮ ಉದ್ದೇಶ ಯಾವ ತರಹ ಈ ಅಪೆಕ್ಸ್ ಆಥಾರಿಟಿಯಲ್ಲಿ ಇರಬೇಕೆಂದು ಪ್ರಿಯಾಂಬಲ್‌ನಲ್ಲಿ ಸ್ಪಷ್ಟವಾಗಿ ಇದೆ. ಅದೇನೆಂದರೆ ಪ್ಲಾನಿಂಗ್, ಕೋ ಆರ್ಡಿನೇಟಿಂಗ್ ಮತ್ತು ಸೂಪರ್‌ವೈಜಿಂಗ್, ಬಗ್ಗೆ. ಇಲ್ಲ ನಾವು ಲೀಗಲಪ ಾಯಿಂಟ್ ಮೇಲೆ ವಾದ ಇಲ್ಲ. ಇಲ್ಲಿ ಏನಾಗುತ್ತದೆ ಎಂದರೆ ಬಿ.ಡಿ.ಎ. ಕೆ.ಎಸ್.ಆರ್.ಟಿ.ಸಿ. ಇಂತಹ ಬಾಡಿಗಳಿಗೆ ಡೈರೆಕ್ಷನ್ಸ್ ಕಳುಹಿಸತಕ್ಕಂಥಾದ್ದು ಸರ್ಕಾರಕ್ಕೆ ಇದೆ. ಈ ಡೈರೆಕ್ಷನ್ಸ್ ಯಾವ ಯಾವುದು ಇದೆ ಅದು ಆಥಾರಿಟಿಗೆ ಈಗಾಗಲೇ ಇದೆ. ಇದರಿಂದ ಏನಾಗುತ್ತದೆ ಎಂದರೆ two levels ಆಗುತ್ತದೆ. ಆಯಾ ಫಂಕ್ಷನಲ್ ಬಾಡಿಗೆ ಡೈರೆಕ್ಷನ್ ಕೊಡುವುದು ಒಂದು, ಆಮೇಲೆ ಪುನಃ ಮೆಟ್ರೋಪಾಲಿಟನ್ ಆಥಾರಿಟಿಗೆ ಡೈರೆಕ್ಷನ್ ಕೊಡತಕ್ಕದ್ದು. ಎರಡು ವಿಧವಾಗಿ ಡೈರೆಕ್ಷನ್ಸ್ ಕೊಡತಕ್ಕಂಥಾದ್ದು ಆಗುತ್ತದೆ. ಎರಡು ಕಡೆಯಿಂದ ಡೈರೆಕ್ಷನ್ಸ್ ಕೊಟ್ಟು ಕೆಲಸ ಮಾಡುವುದು ಇದರಿಂದ ಆಗುತ್ತದೆ. ಇದರಿಂದ ಯಾವ ಸ್ವಾಯತ್ತತೆ ಮೆಟ್ರೋಪಾಲಿಟನ್ ಬಾಡಿಗೆ ಬರುವುದಿಲ್ಲ.

ಅಧ್ಯಕ್ಷರು.—ಓವರ್ ಲ್ಯಾಪಿಂಗ್ ಆಗುತ್ತದೆ ಎಂದು ಹೇಳುತ್ತೀರಿ.

ಶ್ರೀ ಎಂ. ವೀರಪ್ಪಮೊಯಿಲಿ.—ಓವರ್ ಲ್ಯಾಪಿಂಗ್ ಆಗುತ್ತದೆ. ಆಯಾ ಫಂಕ್ಷನಲ್ ಬಾಡಿಗೆ ಡೈರೆಕ್ಷನ್ ಕೊಡತಕ್ಕದ್ದು, ಬಿ.ಡಿ.ಎ, ಕೆ.ಎಸ್.ಆರ್.ಟಿ.ಸಿ, ಕೆ.ಇ.ಬಿ.ನಲ್ಲಿದೆ. ಈ ಪ್ರಕಾರ ಪುನಃ ಮೆಟ್ರೋಪಾಲಿಟನ್ ಬಾಡಿಗೆ ಡೈರೆಕ್ಷನ್ ಕೊಡುವುದು ಇದ್ದರೆ, ಮೆಟ್ರೋಪಾಲಿಟನ್, ಬಾಡಿ ಮತ್ತು ಇತರ ಫಂಕ್ಷನಲ್ ಬಾಡೀಸ್ ಇದೆಯಲ್ಲ ಅದು ಒಂದು ಮಿಥ್ ಆಗುತ್ತದೆ. That means you are making these Metropolitan Bodies, Functional Bodies as Myths. Government is concentrating power at every level. That means a sort of dictatorship is there at every level. Please see Section 10(5), "Any authority or person aggrieved by the decision of the Authority under sub-section (4) may, within thirty days from the date of the decision appeal against such decision to the State Govt. whose decision thereon shall be final". ಇದರಿಂದ ಕೊನೆಗೆ ಏನಾಗುತ್ತದೆ, ರೆಡ್ ಟೇಪಿಸಂ ಭೂತಾಕಾರವಾಗಿ ಬೆಳೆಯತಕ್ಕಂಥ ಒಂದು ವ್ಯವಸ್ಥೆಯನ್ನು ಈ ಒಂದು ಕಾರ್ಯಕ್ರಮದಲ್ಲಿ ನೀವು ಮಾಡುತ್ತೀರಿ. ಏಕೆಂದರೆ ಈಗ ಬಿ.ಡಿ.ಎ. ಯಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆ. At every stage every authority is putting its Foot-out. ಆದುದರಿಂದ ಈ ವ್ಯವಹಾರಕ್ಕೆ ಹೋಗ ತಕ್ಕಂಥಾದ್ದರಿಂದ ಪ್ರಯೋಜನ ಬರುವುದಿಲ್ಲ. ಯಾವ ಉದ್ದೇಶದಿಂದ ನೀವು ಈ ಕಾನೂನನ್ನು, ಆಥಾರಿಟಿಯನ್ನು ಮಾಡಲಿಕ್ಕೆ ಹೇಳುತ್ತೀರಿ ಆ ಉದ್ದೇಶ ಸಫಲವಾಗುವುದಿಲ್ಲ. ಅದರ ಬದಲಾಗಿ you are building empire against empire. ಆದುದರಿಂದ ಇದನ್ನು ಪುನಃ ಆಲೋಚನೆ ಮಾಡುವುದು ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.—ಇದರಲ್ಲಿ ಕಾನ್‌ಸೆಂಟ್ರೇಷನ್ ಆಫ್ ಪವರ್ ಏನೂ ಇಲ್ಲ.

ಅಧ್ಯಕ್ಷರು.—ಮಾನ್ಯ ಕೃಷ್ಣನ್ ಅವರೇ ಕುಳಿತುಕೊಳ್ಳಿ. ಎಷ್ಟು ಸಲ ತಾವು ಏಳುವುದು, ಕುಳಿತುಕೊಳ್ಳುವುದು ?

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಕ್ಲಾರಿಫಿಕೇಷನ್ ಕೇಳಬೇಕಾಗಿದೆ. State Government is the authority for revising. The Hon'ble Minister stated th t the State Government means the Housing & Urban Development Department. If it is the Urban Development Secreretary or the Minister, then comes the difficulty, because a bigger authority like the Chief Minister is already there in the Metropolitan Authority and so this cannot be the State Government. State Government means the council of Ministers.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಆಗಲೇ ಅದಕ್ಕೆ ಉತ್ತರ ಹೇಳಿದ್ದೇನೆ. ಪುನಃ ಅವರಿಗೆ ಉತ್ತರ ಕೊಟ್ಟು ಬಿಡುತ್ತೇನೆ.

ಅಧ್ಯಕ್ಷರು.—ಮಾಜಿ ನಗರಾಭಿವೃದ್ಧಿ ಮಂತ್ರಿಗಳು ಏನೋ ಸಲಹೆ ಕೊಡುತ್ತಾರೆ. ನೋಡೋಣ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಈ ಒಂದು ಮಸೂದೆಯನ್ನು ಡ್ರಾಫ್ಟ್ ಮಾಡುವ ಸಮಯದಲ್ಲಿ ನಾನು ನಗರಾಭಿವೃದ್ಧಿ ಸಚಿವನಾಗಿದ್ದೆ. ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡಿ ಇದರ ಕಾನ್ಸ್ಟಿಟ್ಯೂಷನ್ ಹೇಗಿರಬೇಕು, ಇದರ ಫಂಕ್ಷನ್ಸ್ ಹೇಗಿರಬೇಕೆಂಬ ಬಗ್ಗೆ ವಿರೋಧಪಕ್ಷದ ಹಾಗೂ ಎಲ್ಲಾ ಪಕ್ಷದ ನಾಯಕರನ್ನು ಕರೆಯಿಸಿ ಈ ಬಗ್ಗೆ ತೀರ್ಮಾನ ತೆಗೆದುಕೊಂಡಿರುತ್ತೇವೆ. ಇವೊತ್ತು ಇದು ಮಸೂದೆಯಾಗಿ ನಮ್ಮ ಮುಂದೆ ಬಂದಿದೆ. ಮಾನ್ಯ ವೀರಪ್ಪಮೊಯಿಲಿ ಅವರು ಇರಲಿಲ್ಲ ಎಂದು ಕಾಣುತ್ತದೆ, ಮಿಕ್ಕವರೆಲ್ಲ ಇದ್ದರು. ಮಿಕ್ಕ ನಾಯಕರೆಲ್ಲಾ ಇದ್ದರು, ಎಲ್ಲರೂ ಚರ್ಚೆ ಮಾಡಿ ಇದರಲ್ಲಿ ಚಾಪ್ಟರ್ ೩(೧೦)ರಲ್ಲಿ ಮಾನ್ಯ ಕೃಷ್ಣನ್ ಅವರು ಸೂಚನೆ ಮಾಡಿದ ಹಾಗೆ No other Authority, ಎನ್ನುವ ಬದಲಿಗೆ No local Authority ಎಂದು between the parties ಎಂದರೆ ಬೆಂಗಳೂರು ಕಾರ್ಪೋರೇಷನ್ ಜ್ಯೂರಿಸ್ಡಿಕ್ಷನ್ ಒಂದೇ ಅಲ್ಲ, ಸುತ್ತ ಇರುವ ೯-೧೨ ತಾಲ್ಲೂಕುಗಳು, ಪುರಸಭೆಗಳು ಬರುತ್ತವೆ. ಅದೆಲ್ಲಾ local authorities ಈ local authorities Town Planning Rules ಪ್ರಕಾರ ಈ ಅಥಾರಿಟಿಗೂ, ಅವಕ್ಕೂ ಏನಾದರೂ ವ್ಯತ್ಯಾಸ ಬಂದಾಗ ಸರಕಾರ ಬಂದು ಮಧ್ಯ ಪ್ರವೇಶ ಮಾಡತಕ್ಕದ್ದು ಎನ್ನುವುದಕ್ಕೆ ಇದು ಇರುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮೆಟ್ರೋಪಾಲಿಟನ್ ಕೌನ್ಸಿಲ್ ಇರುವುದು ಏತಕ್ಕೆ ಸ್ವಾಮಿ ?

ಅಧ್ಯಕ್ಷರು.—ಅದನ್ನು ಇಷ್ಟರವರೆಗೆ ಚರ್ಚೆ ಮಾಡಿರುತ್ತೀರಿ.

ಶ್ರೀ ಎಂ. ಚಂದ್ರಶೇಖರ್.—ಮೆಟ್ರೋಪಾಲಿಟನ್ ಅಥಾರಿಟಿ ಇರುವುದು, ಆಗಲೇ ಹೇಳಿದ ಹಾಗೆ ಅನೇಕ ಸಂಸ್ಥೆಗಳು ಇವೆ. ವಾಟರ್‌ಸಪ್ಲೈ ಬೋರ್ಡ್, ಕಾರ್ಪೋರೇಷನ್, ಬಿ.ಡಿ.ಎ. ಎಲೆಕ್ಟ್ರಿಸಿಟಿ ಬೋರ್ಡ್, ಇವುಗಳಲ್ಲಿ ಕೋ-ಆರ್ಡಿನೇಷನ್ ಮಾಡುವುದಕ್ಕೆ ಇವುಗಳ ಮೇಲೆ ಈ ಅಥಾರಿಟಿ ಸೂಪರ್‌ಸೀಡ್ ಮಾಡುವುದಿಲ್ಲ. ಲೋಕಲ್ ಅಥಾರಿಟೀಸ್‌ಗೆ, ಮುನಿಸಿಪಲ್ ನೋಟಿಫೈಡ್ ಏರಿಯಾಸ್‌ಗೆ ಸಪರೇಟ್ ಆಗಿ ಟೌನ್ ಪ್ಲ್ಯಾನಿಂಗ್ ಡೆವಲಪ್‌ಮೆಂಟ್ ಎಲ್ಲಿ ಇರುತ್ತದೆ ? ಅದು ಈ ಅಥಾರಿಟಿ ಒಳಗೆ ಇರುವಾಗ ಅವರೇನಾದರೂ ಮಾಡಬೇಕೆಂದಾಗ ಈ ಅಥಾರಿಟಿಯ ಒಪ್ಪಿಗೆ ಪಡೆಯಬೇಕು. ಒಂದು ಸಮಯ ಈ ಅಥಾರಿಟಿಗೂ, ಆ ಅಥಾರಿಟಿಗಳಿಗೂ ಏನಾದರೂ ವ್ಯತ್ಯಾಸ ಇದಾಗ ಅದು ಸರಕಾರದ ಮುಂದೆ ಹೋಗಬೇಕೆಂದು ನನ್ನ ಭಾವನೆ. ಅದನ್ನು ಮಾನ್ಯ ಮಂತ್ರಿಗಳು ಮಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರಲ್ಲಿ ಕಾನ್‌ಸೆಂಟ್ರೇಷನ್ ಆಫ್ ಪವರ್ ಏನೇನೂ ಇಲ್ಲ. ತೆರೆದ ಮನಸ್ಸಿನಿಂದ ನಾನು ಆಗಲೇ ಹೇಳಿದ್ದೇನೆ. ಏನಾದರೂ ಲೋಪದೋಷ ಮುಂದೆ ಬಂದರೆ ನಾನು ಈ ಸಭೆಯ ಮುಂದೆ ಬರುತ್ತೇನೆ. ಬೇರೆ ರಾಜ್ಯಗಳಲ್ಲಿ ಯಾವ ಆಧಾರದ ಮೇಲೆ ಇದನ್ನು ಮಾಡಿದ್ದಾರೆ ಎಂಬುದನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ, ಸನ್ಮಾನ್ಯ ಚಂದ್ರಶೇಖರ್‌ರವರು ಹೇಳಿದಹಾಗೆ ಜನತೆ ಬರೀ ಕಾನೂನು ನೋಡುವುದಿಲ್ಲ. ಕಾನೂನಿನ ಹಿಂದೆ, ಏನು ಡಿಬೇಟ್ ಆಯಿತು, ಮಾನ್ಯ ಚಂದ್ರಶೇಖರ್‌ರವರು ಏನು ಇಂಟರ್‌ಪ್ರಿಟ್‌ಷನ್ ಕೊಟ್ಟರು, ಅದನ್ನು ನೋಡುತ್ತಾರೆ. ಆ ಇಂಟರ್‌ಪ್ರಿಟಿಷನ್ ಪ್ರಕಾರ ಸರಕಾರಕ್ಕೆ ಪವರ್ ಕೊಟ್ಟಿದ್ದೇವೆ ಎಂದರೆ ಏನು ಅರ್ಥ ಆಯಿತು ? ಕೋ-ಆರ್ಡಿನೇಷನ್ ಮಾಡತಕ್ಕ ಅಧಿಕಾರ ಸರಕಾರದಲ್ಲಿ ಉಳಿಯಿತು.

ಅಧ್ಯಕ್ಷರು.—ಮಾನ್ಯ ವೀರಪ್ಪ ಮೊಯಿಲಿಯವರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ, ಬೇಗ ಮುಗಿಸುವುದಲ್ಲ. ನಾವು ಅನಾವಶ್ಯಕವಾಗಿ ಬೆಳೆಸಿಕೊಂಡು ಹೋಗತಕ್ಕಂಥ ಪ್ರಶ್ನೆ ಅಲ್ಲ. It should be exposed through the Members. ಮಾಜಿ ಸಚಿವರಾದ ಮಾನ್ಯ ಚಂದ್ರಶೇಖರ್‌ರವರು ಒಂದು ವಾಖ್ಯಾನ ಕೊಟ್ಟರು. ಆ ವ್ಯಾಖ್ಯಾನದ ಹಿನ್ನೆಲೆಯಲ್ಲಿ ಈ ಮಸೂದೆಯನ್ನು ಉಪಯೋಗಿಸಿಕೊಳ್ಳುವುದಿದ್ದರೆ ಅದರಿಂದ ಬಹಳ ಅನಾಹುತವಾಗುತ್ತದೆ. ಆ ವ್ಯಾಖ್ಯಾನ ವಿತ್ ಡ್ರಾ ಮಾಡಿ ಎಂದು ನಾನು ಹೇಳುವುದಿಲ್ಲ, ಆ ವ್ಯಾಖ್ಯಾನ ಸರಿಯಲ್ಲ ಎಂದು ಈ ಸದನದ ರೆಕಾರ್ಡ್‌ನಲ್ಲಿ ಹೋಗಬೇಕಾಗುತ್ತದೆ. It is to be made clear. ಸರಕಾರಕ್ಕೆ ರಿವಿಷನ್ ಪವರ್ ಇರಬೇಕು ಅಪ್‌ಲೆಟ್ ಪವರ್ ಇರಬೇಕು. ಬೇರೆ ಬೇರೆ ಲೋಕಲ್ ಅಥಾರಿಟೀಸ್ ಇರುತ್ತವೆ, ಗ್ರಾಮಗಳು ಬರುತ್ತವೆ ಅವುಗಳೆಲ್ಲವನ್ನೂ ಕೋ-ಆರ್ಡಿನೇಟ್ ಮಾಡುವುದಕ್ಕೆ. ಸರ್ಕಾರ ಹೋಗಬೇಕಾದ ಅವಶ್ಯಕತೆ ಬರುವುದಿದ್ದರೆ ಮೆಟ್ರೋಪಾಲಿಟನ್ ಕೌನ್ಸಿಲ್‌ನ ಅವಶ್ಯಕತೆ ಇರುವುದಿಲ್ಲ. ಮೆಟ್ರೋಪಾಲಿಟನ್ ಕೌನ್ಸಿಲ್‌ಗೆ ಏನು ಅಧಿಕಾರ ಕೊಡಬೇಕು, ಕೋ-ಆರ್ಡಿನೇಷನ್, ಮಾನಿಟರಿಂಗ್, ಪ್ಲಾನಿಂಗ್ ಇದಕ್ಕೆ ಅವಕಾಶ ಕೊಡಬೇಕೆಂದು ಮಾಡಿರುತ್ತೀರಿ. ಈ ಉದ್ದೇಶ ಸಂಪೂರ್ಣವಾಗಿ ವಿಫಲವಾಗುತ್ತದೆ. But again it will be vested in the hands of the Govertment. ಇದು ಆ ಉದ್ದೇಶ ಅಲ್ಲ. Co-ordination will be with the concil. There should be minimum interference. ಆ ಉದ್ದೇಶದಿಂದ ಇದನ್ನು ಮಾಡಿದೆ. ಏಕೆಂದರೆ ಕೌನ್ಸಿಲ್‌ನಲ್ಲಿ ಎಲ್ಲರ ಪ್ರಾತಿನಿಧ್ಯ ಇರುತ್ತದೆ. ಅಲ್ಲಿ ಚರ್ಚೆ ಮಾಡುತ್ತಾರೆ. ಚರ್ಚೆ ಮಾಡಿ ಯಾವುದು untried development ಇದೆ ಅದನ್ನು ತಡೆಯತಕ್ಕ ಶಕ್ತಿ ಕೌನ್ಸಿಲ್‌ಗೆ ಇರುತ್ತದೆ. ಈ ಹಿನ್ನಲೆ ಸರಕಾರದ ಕಡತದಲ್ಲಿರುವುದಿಲ್ಲ ಅದು ಇರುವುದು ಇದ್ದರೆ ಮೆಟ್ರೋಪಾಲಿಟನ್ ಕೌನ್ಸಿಲ್‌ನಲ್ಲಿ Whatever may be the decision, it should be taken after due discussion with technical persons, technical bodies in the Metropolitan Council. ಆ ಉದ್ದೇಶದಿಂದ ಇದನ್ನು ಮಾಡಿದ್ದುದು. ಆದುದರಿಂದ ಇದೆಲ್ಲಾ ಕನ್‌ಸಲ್ಟೇಷನ್ ಬೇಡ, ಡೆಲ್ಟ್‌ರೇಷನ್ ಬೇಡ. ಸರಕಾರ ನಾಲ್ಕು ಗೋಡೆಗಳ ಮಧ್ಯದಲ್ಲಿ ಕುಳಿತುಕೊಂಡು ಡಿಸಿಷನ್ ತೆಗೆದುಕೊಳ್ಳುತ್ತೆಂದು ಹೇಳಿದರೆ the very purpose of this Bill will be defeated. ನಮ್ಮ ನಂಬಿಕೆ ಕೌನ್ಸಿಲ್ ಅಥಾರಿಟಿಯಲ್ಲಿದೆ. ಅದನ್ನು ತಪ್ಪಿಸತಕ್ಕಂಥ ಪ್ರಯತ್ನ ಇದರಿಂದ ಆಗುತ್ತದೆ. ಆದುದರಿಂದ ತಾವು Don't rest the same with the Metropolitan Coucil ಈ ಅರ್ಥದಿಂದ ತಾವು ಮಾಡಿರುತ್ತೀರಿ. ಆದರೆ ತಾವು ಹೇಳುವಾಗ ಅದನ್ನು ಸರಿಯಾಗಿ ಬಿಡಿಸಿ ಹೇಳಲಿಲ್ಲವೋ, ಅರ್ಥೈಸಿ ಹೇಳಲಿಲ್ಲವೋ ಗೊತ್ತಾಗಲಿಲ್ಲ. ತಾವು ಹೇಳಿದಂಥ ಅರ್ಥ ಬಂದರೆ ಅನರ್ಥವಾಗುತ್ತದೆ. ಕೌನ್ಸಿಲ್ ಪವರ್ ಕಿತ್ತು ಗೌರ್ನಮೆಂಟ್ ಬಾಡಿಗೆ ಕೊಡತಕ್ಕದ್ದು ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ ಮಾಡುತ್ತೀರಿ. ಅಲ್ಲಿ Technical body Technical experts ಇರುವುದಿಲ್ಲ. The advise of the representatives of the technical Committee is not available with the Government. ಏಕೆಂದರೆ ಜೆಲಿಬರೇಷನ್ಸ್ ಮಾಡುವಾಗ ಉದ್ದೇಶ ಒಡಮೂಡಿ ಬರಬೇಕಾಗುತ್ತದೆಯೇ ಹೊರತು ಡಿಸ್ಕಷನ್ಸ್ ಮಾಡುವಾಗ ಉದ್ದೇಶ ಒಡಮೂಡಿ ಬರುವುದಿಲ್ಲ.

Statement by the Minister

re: Recognition for M.A. (R.D.S.) Degree of Bangalore University

ಅಧ್ಯಕ್ಷರು.—ಈಗ ಶಿಕ್ಷಣ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತಾರೆ.

SRI M. RAGHUPATHY (Hon. Minister for Education).—The Students' Association of the Centre for Rural Development